ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಗುರುವಾರ, ಅಕ್ಟೋಬರ್ 19, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 157 RNI : 27369/75

janathavani@mac.com
www.janathavani.com
08192 254736 91642 99999

## ತಾರಕಕ್ಕೆ ಡಿಕೆಶಿ-ಜಾರಕಿಹೊಳಿ ಶೀತಲ ಸಮರ

### ಬೆಳಗಾವಿಯಲ್ಲಿ ಡಿಕೆಶಿ ಸಭೆಯಿಂದ ದೂರ ಉಳಿದ ಶಾಸಕರು, ಮುಖಂಡರು

ಬೆಂಗಳೂರು, ಅ.18- ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನಡುವಿನ ಶೀತಲ ಸಮರ ತಾರಕಕ್ಕೇರಿದೆ.



ಕಾರ್ಯಕ್ರಮ ನಿಮಿತ್ತ ಬೆಳಗಾವಿಗೆ ತೆರಳಿದ್ದ ಶಿವಕುಮಾರ್ ಅವರು ನಡೆಸಿದ ಸಭೆಗಳಿಂದ ಸತೀಶ್ ಸೇರಿದಂತೆ ಆ ಭಾಗದ ಬಹುತೇಕ ಪಕ್ಷದ ಶಾಸಕರು ಮತ್ತು ಮುಖಂಡರು ದೂರ ಉಳಿದಿದ್ದರು.

ವಿಧಾನ ಪರಿಷತ್ತಿನ ಸದಸ್ಯ ಪ್ರಕಾಶ್ ಹುಕ್ಕೇರಿ, ಶಾಸಕ ಮಹೇಂದ್ರ ಕೆ. ತಮ್ಮಣ್ಣನವರ್ ಹಾಜರಾಗಿರುವುದನ್ನು ಬಿಟ್ಟರೆ ಉಳಿದವರ್ಯಾರೂ ಸಭೆ ಕಡೆಗೆ ಮುಖ ಹಾಕಿರಲಿಲ್ಲ.

ಕಳೆದ ಒಂದು ವಾರದಿಂದ ಎರಡೂ ಗುಂಪುಗಳ ನಡುವೆ ಮುಸುಕಿನ ಗುದ್ದಾಟ ಜೋರಾಗಿ ಸತೀಶ್ ಬಲ ಪ್ರದರ್ಶನಕ್ಕೂ ಮುಂದಾಗಿದ್ದರು. ಅಷ್ಟೇ ಅಲ್ಲ, ತಮಗೆ ತಕ್ಷಣವೇ ಉಪ ಮುಖ್ಯಮಂತ್ರಿ ಸ್ಥಾನ, ಬೆಳಗಾವಿ ಆಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಮ್ಮ ಹಿಡಿತದಲ್ಲಿ ಮೇಲುಗೈ ಸಾಧಿಸಬೇಕು ಎಂದು ಪಟ್ಟು ಹಿಡಿದಿದ್ದರು.

ವರಿಷ್ಠರ ಮಧ್ಯ ಪ್ರವೇಶದಿಂದ ಬಲ ಪ್ರದರ್ಶನವನ್ನು ಹಿಂತೆಗೆದುಕೊಂಡಿದ್ದ ಜಾರಕಿಹೊಳಿ, ತಮ್ಮ ಬೇಡಿಕೆ ಹಾಗೂ ಒತ್ತಾಯದಿಂದ ಹಿಂದೆ ಸರಿದಿರಲಿಲ್ಲ.

ಇದರ ಮಧ್ಯೆ ಬೆಳಗಾವಿಗೆ ತೆರಳಿದ್ದ ಶಿವಕುಮಾರ್‌ಗೆ ಮುಂಬೈ ಕರ್ನಾಟಕ ಭಾಗದಲ್ಲಿ ನಮ್ಮದೇ ಪ್ರಾಬಲ್ಯ ಎಂಬುದನ್ನು ಸಾಬೀತು ಪಡಿಸುವಲ್ಲಿ ಸತೀಶ್ ಮತ್ತೊಮ್ಮೆ ಯಶಸ್ವಿಯಾಗಿದ್ದಾರೆ.

ಶಿವಕುಮಾರ್ ಮಾತ್ರ ಪಕ್ಷದಲ್ಲಿ ಮತ್ತು ಸರ್ಕಾರದಲ್ಲಿ ಎಲ್ಲವೂ ಸರಿಯಾಗಿದೆ ಎಂಬಂತೆ ತೋರ್ಪಡಿಸುವ ಪ್ರಯತ್ನ ಮಾಡಿದ್ದಲ್ಲದೆ, ತಾವು ತೆರಳಿದ್ದ ಕಾರ್ಯಕ್ರಮ ಮತ್ತು ಸಭೆಗಳನ್ನು ಮುಗಿಸಿದ್ದಾರೆ.

ಸಭೆಗೂ ಮುನ್ನ ಮಾತನಾಡಿದ ಶಿವಕುಮಾರ್, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಿರುಕಿಲ್ಲ. 136 ಶಾಸಕರೂ ನಮ್ಮವರೇ ಎಂದು ತಿಳಿಸಿದ್ದಾರೆ.

ಬೆಳಗಾವಿಯ ಶಾಸಕರು, ಸಚಿವರು ನಿಮ್ಮನ್ನು ಸ್ವಾಗತಿಸಲು ಬರಲಿಲ್ಲ, ಸತೀಶ್ ಜಾರಕಿಹೊಳಿ ಅವರಿಗೂ ನಿಮಗೂ ಮುನಿಸಿದೆಯೇ ಎನ್ನುವ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಅವರು, ನಿನ್ನೆ, ಮೊನ್ನೆ ಸತೀಶ್ ಅವರು ಮತ್ತು ನಾನು ಜೊತೆಯಲ್ಲಿಯೇ ಕುಳಿತು ಮಾತನಾಡಿದ್ದೇವೆ. ನಾನು ಬಂದಿರುವುದು ಖಾಸಗಿ ಕಾರ್ಯಕ್ರಮಕ್ಕೆ. ನಿನ್ನೆ ರಾತ್ರಿ ಈ ಕಾರ್ಯಕ್ರಮ ನಿಗದಿಯಾದ ಕಾರಣಕ್ಕೆ ಬಂದಿದ್ದೇನೆ. ಎಲ್ಲರಿಗೂ ಅವರದೇ ಆದ ವೈಯಕ್ತಿಕ ಕೆಲಸಗಳು ಇರುತ್ತವೆ ಎಂದು ಹೇಳಿದರು.

ಬಿಜೆಪಿಯ ತಂಡವೊಂದು ಸರ್ಕಾರ ಬೀಳಿಸಲು ನಿರಂತರವಾಗಿ ಪ್ರಯತ್ನ ನಡೆಸುತ್ತಿರುವುದು ನನಗೆ ತಿಳಿದಿದೆ. ಯಾವ ಶಾಸಕರನ್ನು, ಯಾರು ಯಾವಾಗ ಭೇಟಿ ಮಾಡಿದರು, ಮಾಡುತ್ತಿದ್ದಾರೆ ಎಂದು ಸಂಬಂಧಪಟ್ಟವರೇ ನನಗೆ ಮತ್ತು (2ನೇ ಪುಟಕ್ಕೆ)

## ಪರಿಸ್ಥಿತಿ ಒಪ್ಪಿಕೊಳ್ಳಿ, ಯೋಚಿಸಿ ಪ್ರತಿಕ್ರಿಯಿಸಿ

### 'ಒತ್ತಡ ಮುಕ್ತ ಆಡಳಿತ' ಉಪನ್ಯಾಸ ನೀಡಿದ ಬ್ರಹ್ಮಾಕುಮಾರಿ ಆಶಾ ದೀದೀಜಿ



ದಾವಣಗೆರೆ, ಅ.18- ಪರಿಸ್ಥಿತಿಯನ್ನು ಒಪ್ಪಿಕೊಳ್ಳಿ, ಯಾರಿಗಾದರೂ ಪ್ರತಿಕ್ರಿಯಿಸುವಾಗ ಯೋಚಿಸಿ ಪ್ರತಿಕ್ರಿಯಿಸಿ, ಸಕಾರಾತ್ಮಕವಾಗಿ ಚಿಂತಿಸಿ, ನಿತ್ಯ ಧ್ಯಾನದ ಮೂಲಕ ಮನಸ್ಸನ್ನು ಶುದ್ಧ ಮಾಡಿಕೊಳ್ಳಿ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಪ್ರಧಾನ ಕೇಂದ್ರ ಅಬು ಪರ್ವತದ ಆಡಳಿತ ಮಂಡಳಿ ಸದಸ್ಯರೂ, ದೆಹಲಿಯ ಓಂ ಶಾಂತಿ ರಿಟ್ರೀಟ್ ಸೆಂಟರ್ ಸಂಚಾಲಕರೂ ಆದ ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾ ದೀದೀಜಿ ಸಲಹೆ ನೀಡಿದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಈಶ್ವರೀಯ ವಿಶ್ವವಿದ್ಯಾಲಯದ ಶಿವಧ್ಯಾನ ಮಂದಿರದಲ್ಲಿ ಇಂದು ಸಂಜೆ ಹಮ್ಮಿಕೊಳ್ಳಲಾಗಿದ್ದ 'ಒತ್ತಡ ಮುಕ್ತ ಆಡಳಿತ' ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಮನಸ್ಸಿನಲ್ಲಿ ಪ್ರತಿ ದಿನ 60 ಸಾವಿರಕ್ಕೂ ಹೆಚ್ಚು ಆಲೋಚನೆಗಳು ಸುಳಿದಾಡುತ್ತವೆ. ಈ ಆಲೋಚನೆಗಳನ್ನು ಸರಿಯಾದ ಮಾರ್ಗಕ್ಕೆ ತರದೇ ಹೋದರೆ ಒತ್ತಡ ಉಂಟಾಗುತ್ತದೆ ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾ ದೀದೀಜಿ ಹೇಳಿದರು.

1980ರ ದಶಕದಲ್ಲಿ ನಡೆಸಲಾದ ಅಧ್ಯಯನವೊಂದರ ಪ್ರಕಾರ, ಮನಸ್ಸಿನಲ್ಲಿ ಪ್ರತಿದಿನ 30 ಸಾವಿರ ಆಲೋಚನೆಗಳು ಸೃಷ್ಟಿಯಾಗುತ್ತಿದ್ದವು. ಆಧುನಿಕ ವೇಗದ ಕಾಲದಲ್ಲಿ ಆಲೋಚನೆಗಳ ಭರಾಟೆ ಹೆಚ್ಚಾಗಿದ್ದು, 60 ಸಾವಿರಕ್ಕೂ ಹೆಚ್ಚು ಆಲೋಚನೆಗಳು ಬರುತ್ತಿವೆ. ವಾಹನಗಳ (2ನೇ ಪುಟಕ್ಕೆ)


**ಹುದ್ದೆಗಳಿಗೆ ಅತಿಯಾಗಿ ಅಂಟಿಕೊಳ್ಳಬಾರದು**

**ಕಚೇರಿಯಲ್ಲಿನ ಹುದ್ದೆಗಳಿಗೆ ಅತಿಯಾಗಿ ಅಂಟಿಕೊಳ್ಳಬಾರದು. ಇದರಿಂದ ಅಹಂಕಾರ ಭಾವ ಬರುತ್ತದೆ. ಹುದ್ದೆಗಳು ಇರುವುದು ಅಧಿಕಾರ ಚಲಾಯಿಸಲು ಅಲ್ಲ, ಸೇವೆ ಮಾಡಲು. ಅಧಿಕಾರಕ್ಕೆ ಅಂಟಿಕೊಳ್ಳದೇ ನಿರ್ಲಿಪ್ತರಾಗಿರಬೇಕು. ಸೇವೆಯ ಕಡೆ ಹೆಚ್ಚು ಆಸಕ್ತಿ ತೋರಬೇಕು ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾ ದೀದೀಜಿ ಹೇಳಿದರು. ಕಚೇರಿಯಲ್ಲಿ ಯಾವುದೇ ಉನ್ನತ ಹುದ್ದೆ ಹೊಂದಿದ್ದರೂ ಸಹ ಮನೆಗೆ ಬಂದ ಮೇಲೆ ಅವರು ಗಂಡ-ಹೆಂಡತಿ, ತಂದೆ - ತಾಯಿ ಆಗುತ್ತಾರೆ. ಹೀಗಾಗಿ ಕಚೇರಿಯ ಮನೋಭಾವವನ್ನು ಮನೆಗೆ ಬಂದಾಗ ತೊರೆಯಬೇಕು ಎಂದವರು ಕಿವಿ ಮಾತು ಹೇಳಿದರು.**

## ರಾಗಿಗುಡ್ಡ ಪ್ರವೇಶಕ್ಕೆ ನಿಷೇಧ

### ಪೊಲೀಸರ ಕ್ರಮಕ್ಕೆ ಪ್ರಮೋದ್ ಮುತಾಲಿಕ್ ಖಂಡನೆ

ದಾವಣಗೆರೆ, ಅ. 18- ಶಿವಮೊಗ್ಗ ನಗರದ ರಾಗಿಗುಡ್ಡ ಬಡಾವಣೆಗೆ ಒಂದು ತಿಂಗಳವರೆಗೆ ಬರದಂತೆ ಪೊಲೀಸರು ನೋಟಿಸ್ ನೀಡಿರುವುದನ್ನು ಶ್ರೀ ರಾಮಸೇನೆ ರಾಷ್ಟ್ರೀಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಖಂಡಿಸಿದ್ದು, ರಾಜ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗುವುದಾಗಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಶಿವಮೊಗ್ಗದ ರಾಗಿಗುಡ್ಡದಲ್ಲಿ ನಡೆದ ಗಲಭೆ ಸ್ಥಳಕ್ಕೆ ಹೋಗಲು ತೀರ್ಮಾನಿಸಿದ್ದೆ. ಅ. 17 ರಂದು ರಾತ್ರಿ ಮಂಗಳೂರಿನಿಂದ ನಾನು ಬಸ್ಸಿನಲ್ಲಿ ಬರುತ್ತಿರುವಾಗ ತಡ ರಾತ್ರಿ 'ಮಾಸ್ತಿಕಟ್ಟೆ' ಬಳಿ ನನ್ನನ್ನು ತಡೆದು ಬಂಧಿಸಿ, ದಾವಣಗೆರೆಗೆ ತಂದು ಬಿಟ್ಟಿದ್ದಾರೆ. ಈ ನಿರ್ಧಾರದ ವಿರುದ್ಧ ಹೈಕೋರ್ಟ್‌ಗೆ ನ್ಯಾಯ ಕೇಳಲು ಹೋಗುತ್ತೇನೆ ಎಂದರು.

ಬಸ್ಸಿನಲ್ಲಿ ಕುಳಿತಿದ್ದಾಗ ಮಾಸ್ತಿಕಟ್ಟೆಗೆ ಆಗಮಿಸಿ, ನನಗೆ ನೋಟೀಸ್ ನೀಡಿರುವ ಶಿವಮೊಗ್ಗ ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ರಾಗಿಗುಡ್ಡ ಪ್ರಕರಣದ ತನಿಖೆಯಿಂದ ಸತ್ಯಾಸತ್ಯತೆ ಹೊರ ಬರಬೇಕಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಹಿಂದೂ ವಿರೋಧಿಯಾಗಿದ್ದಾರೆ. ಅವರ ಕುಮ್ಮಕ್ಕಿನಿಂದಲೇ ಇಂತಹ ಘಟನೆಗಳು ಮರುಕಳಿಸುತ್ತಿವೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಹಿಂದೂ ನಾಯಕರನ್ನು ಬಂಧಿಸುವ ಮತ್ತು ಹಿಂದೂ ಸಂಘಟನೆಗಳನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ಕಾಂಗ್ರೆಸ್, ಬಿಜೆಪಿ ಪಕ್ಷಗಳಿಗೆ ಹಿಂದೂಗಳು, ಹಿಂದುತ್ವದ ಕಾಳಜಿ ಇಲ್ಲವಾಗಿದೆ.

ಹಿಂದೂ, ಹಿಂದುತ್ವ ಯಾರಿಗೂ ಬೇಡವಾಗಿದೆ. ಹಿಂದೂಗಳೇ ತಮ್ಮ ಸುರಕ್ಷತೆಯನ್ನು ತಾವೇ ಮಾಡಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿದೆ ಎಂದು (2ನೇ ಪುಟಕ್ಕೆ)

## ಸಕ್ಕರೆ ರಫ್ತು ನಿಷೇಧ ವಿಸ್ತರಣೆ

ನವದೆಹಲಿ, ಅ. 18 - ಕೇಂದ್ರ ಸರ್ಕಾರ ಸಕ್ಕರೆ ರಫ್ತಿನ ಮೇಲಿನ ನಿಷೇಧವನ್ನು ಅಕ್ಟೋಬರ್ 31ರ ಆಚೆಗೂ ವಿಸ್ತರಿಸಿದೆ. ದೇಶೀಯ ಮಾರುಕಟ್ಟೆಯಲ್ಲಿ ಸಕ್ಕರೆ ಲಭ್ಯತೆ ಹೆಚ್ಚಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಹಿಂದೆ ಸಕ್ಕರೆ ರಫ್ತಿನ ಮೇಲೆ ಅಕ್ಟೋಬರ್ ಅಂತ್ಯದವರೆಗೆ ನಿರ್ಬಂಧ ಹೇರಲಾಗಿತ್ತು. ಪರಿಸ್ಥಿತಿ ಹಿಂದಿನಂತೆಯೇ ಇರುವ ಕಾರಣ, ನಿಷೇಧವನ್ನು ವಿಸ್ತರಿಸಲಾಗಿದೆ ಎಂದು ವಿದೇಶ ವ್ಯಾಪಾರ ಪ್ರಧಾನ ನಿರ್ದೇಶನಾಲಯ ತಿಳಿಸಿದೆ. ಆದರೆ, ಯುರೋಪ್ ಒಕ್ಕೂಟ ಹಾಗೂ ಅಮೆರಿಕಗಳಿಗೆ ಸಿ.ಎಕ್ಸ್.ಎಲ್. ಹಾಗೂ ಟಿ.ಆರ್.ಕ್ಯೂ. ನಿಯಮಗಳ ಅನ್ವಯ ಮಾಡಲಾಗುವ ರಫ್ತಿಗೆ ನಿಷೇಧ ಅನ್ವಯವಾಗುವುದಿಲ್ಲ.

## ಕೇಂದ್ರ ನೌಕರರ ತುಟ್ಟಿಭತ್ಯೆ ಶೇ.4ರಷ್ಟು ಹೆಚ್ಚಳ

ನವದೆಹಲಿ, ಅ. 18 – ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆಯನ್ನು ಶೇ.4ರಷ್ಟು ಹೆಚ್ಚಿಸಿ ಶೇ.46ಕ್ಕೆ ನಿಗದಿ ಪಡಿಸಲು ಕೇಂದ್ರ ಸಂಪುಟ ಅನುಮತಿ ನೀಡಿದೆ. ಇದರಿಂದ 48.67 ಲಕ್ಷ ಕೇಂದ್ರ ನೌಕರರು ಹಾಗೂ 67.95 ಲಕ್ಷ ಪಿಂಚಣಿದಾರರಿಗೆ ನೆರವಾಗಲಿದೆ. ಜುಲೈ 1, 2023ರಿಂದ ಈ ಹೆಚ್ಚಳ ಪೂರ್ವಾನ್ವಯವಾಗಲಿದೆ ಎಂದು ಸಂಪುಟ ಸಭೆಯ ನಂತರ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

## ಫಿನೊಲೆಕ್ಸ್ ಕೇಬಲ್ಸ್ ಪ್ರಕರಣ

**ಎನ್.ಸಿ.ಎಲ್.ಎ.ಟಿ. ಸದಸ್ಯರಿಗೆ ನ್ಯಾಯಾಂಗ ನಿಂದನಾ ನೋಟಿಸ್**

ನವದೆಹಲಿ, ಅ. 18 – ಫಿನೊಲೆಕ್ಸ್ ಕೇಬಲ್ಸ್ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿರುವ ಆರೋಪದ ಮೇಲೆ ರಾಷ್ಟ್ರೀಯ ಕಂಪನಿಗಳ ಕಾನೂನು ಮೇಲ್ಮನವಿ ಪ್ರಾಧಿಕಾರ (ಎನ್.ಸಿ.ಎಲ್.ಎ.ಟಿ.) ನ್ಯಾಯಿಕ ಸದಸ್ಯ ರಾಕೇಶ್ ಕುಮಾರ್ ಹಾಗೂ ತಾಂತ್ರಿಕ ಸದಸ್ಯ ಅಲೋಕ್ ಶ್ರೀವಾಸ್ತವ ಅವರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಎನ್.ಸಿ.ಎಲ್.ಎ.ಟಿ. ಪೀಠ ಹೊರಡಿಸಿರುವ ಆದೇಶಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ನೋಟಿಸ್ ಕಳಿಸಿದೆ.

ಎನ್.ಸಿ.ಎಲ್.ಎ.ಟಿ. ಸದಸ್ಯರ ವಿರುದ್ಧ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನಾ ನೋಟಿಸ್ ಕಳಿಸುವುದು ಅಪರೂಪದ ಪ್ರಕರಣವಾಗಿದೆ.

ಫಿನೊಲೆಕ್ಸ್ ಕೇಬಲ್ಸ್ ವಾರ್ಷಿಕ ಮಹಾಸಭೆಗೆ ಸಂಬಂಧಿಸಿದಂತೆ ಎನ್.ಸಿ.ಎಲ್.ಎ.ಟಿ. ಪೀಠ ಅಕ್ಟೋಬರ್ 13ರಂದು ನೀಡಿದ ತೀರ್ಪನ್ನೂ ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಈ ಪ್ರಕರಣವನ್ನು ಎನ್. (2ನೇ ಪುಟಕ್ಕೆ)

## ಗೋಧಿ ಬೆಂಬಲ ಬೆಲೆ 150 ರೂ. ಹೆಚ್ಚಳ

ನವದೆಹಲಿ, ಅ. 18 – 2024-25ರ ಸಾಲಿಗೆ ಗೋಧಿಯ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 150 ರೂ.ಗಳಷ್ಟು ಹೆಚ್ಚಿಸಿ 2,275 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಇದೇ ಮೊದಲ ಬಾರಿಗೆ ಗೋಧಿ ಬೆಂಬಲ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದೇ ವೇಳೆ ಕಡಲೆ ಬೆಂಬಲ ಬೆಲೆಯನ್ನು 105 ರೂ.ಗಳಷ್ಟು ಹೆಚ್ಚಿಸಿ 5,540 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಮಸೂರದ ಬೆಂಬಲ ಬೆಲೆಯನ್ನು 425 ರೂ.ಗಳಷ್ಟು ಹೆಚ್ಚಿಸಿ 6,425 ರೂ.ಗಳಿಗೆ ನಿಗದಿ (2ನೇ ಪುಟಕ್ಕೆ)

## ಸಿ.ಎಂ. ಇಬ್ರಾಹಿಂ ಉಚ್ಚಾಟನೆಗೆ ದೇವೇಗೌಡರ ನಿರ್ಧಾರ

ಬೆಂಗಳೂರು, ಅ. 18 - ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ ಪಕ್ಷದಿಂದ ಉಚ್ಚಾಟಿಸಲು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ತೀರ್ಮಾನಿಸಿದ್ದಾರೆ.

ವಜಾ ಮತ್ತು ಉಚ್ಚಾಟನೆ ಮಾಡಲು ನಾಳೆ ತುರ್ತು ಕೋರ್ ಕಮಿಟಿ ಹಾಗೂ ಪಕ್ಷದ ಶಾಸಕರ ಸಭೆಯನ್ನು ಕರೆದಿದ್ದಾರೆ.

ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದು ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿಯಾಗಿ ಪಕ್ಷ ಕೈಗೊಂಡ ತೀರ್ಮಾನದ ವಿರುದ್ಧವಾಗಿ ರಾಜ್ಯಾಧ್ಯಕ್ಷರು ನಡೆದುಕೊಳ್ಳುತ್ತಿರುವ ಬಗ್ಗೆ ಪೂರ್ಣ ಮಾಹಿತಿ ನೀಡಿ, ತಮ್ಮನ್ನೇ ಪಕ್ಷದಿಂದ ಉಚ್ಚಾಟಿಸಲು ಮುಂದಾಗಿರುವ ಬಗ್ಗೆಯೂ ವಿವರಣೆ ನೀಡಿದ್ದಾರೆ. ಆ ನಂತರ ಕುಮಾರಸ್ವಾಮಿ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ಸಮಾಲೋಚನೆ ನಡೆಸಿದರು.

ಇದಾದ ನಂತರ ದೇವೇಗೌಡರು ನಾಳೆ ತುರ್ತಾಗಿ ಸಭೆಗಳನ್ನು ನಡೆಸಿ ಕಾನೂನಾತ್ಮಕವಾಗಿ ಶಿಸ್ತು ಕ್ರಮ ಕೈಗೊಳ್ಳಲು ತೀರ್ಮಾನ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಹಿಂದೂಗಳ ಧಾರ್ಮಿಕ ಸ್ಥಳಗಳ ನಿರ್ವಹಣೆ ಹಕ್ಕು: ಅರ್ಜಿ ವಿಚಾರಣೆಗೆ ಒಪ್ಪದ ಕೋರ್ಟ್

ನವದೆಹಲಿ, ಅ. 18 - ಹಿಂದೂ, ಜೈನ, ಬೌದ್ಧ ಹಾಗೂ ಸಿಖ್ ಸಮುದಾಯದವರು ತಮ್ಮ ಧಾರ್ಮಿಕ ಸ್ಥಳಗಳನ್ನು ತಾವೇ ನಿರ್ವಹಿಸಲು ಅವಕಾಶ ನೀಡಬೇಕು ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂ ಕೋರ್ಟ್, ಇದು ಜನಪ್ರಿಯತೆಗಾಗಿ ದಾಖಲಿಸಿರುವ ಅರ್ಜಿ ಎಂದು ಹೇಳಿದೆ.

ಈ ವಿಷಯ ಪ್ರಮುಖವಾಗಿ ಶಾಸಕಾಂಗದ ವ್ಯಾಪ್ತಿಗೆ ಬರುತ್ತದೆ. ನ್ಯಾಯಾಲಯ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲು ಸಾಧ್ಯವಾಗದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಹೇಳಿದೆ. ವಕೀಲ ಅಶ್ವಿನಿ ಉಪಾಧ್ಯಾಯ್ ಅವರು ಅರ್ಜಿ ದಾಖಲಿಸಿ, ಮುಸ್ಲಿಂ, ಪಾರ್ಸಿ ಹಾಗೂ ಕ್ರಿಶ್ಚಿಯನ್ನರ ರೀತಿಯಲ್ಲೇ ಇತರೆ ಧರ್ಮೀಯರೂ ತಮ್ಮ ಧಾರ್ಮಿಕ ಸ್ಥಳಗಳ ನಿರ್ವಹಿಸುವ ಅಧಿಕಾರ ನೀಡಬೇಕು ಎಂದು ಕೇಳಿದ್ದರು.

## ಇತರೆ ಇಲಾಖೆಗಳಲ್ಲಿ ಕ್ರೀಡಾ ಮಿಸಲಾತಿ : ಸಿಎಂ ಸ್ಪಂದನೆ

ಬೆಂಗಳೂರು, ಅ. 18 - ಪೊಲೀಸ್ ಹಾಗೂ ಅರಣ್ಯ ಇಲಾಖೆಗಳಲ್ಲಿ ಕ್ರೀಡಾಪಟುಗಳಿಗೆ ನೀಡಲಾಗುತ್ತಿರುವ ಮೀಸಲಾತಿಯನ್ನು ಬೇರೆ ಇಲಾಖೆಗಳಿಗೂ ವಿಸ್ತರಿಸುವ ಬಗ್ಗೆ ಸಕಾರಾತ್ಮಕವಾಗಿ ಪರಿಶೀಲಿಸುತ್ತಿರುವುದಾಗಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಇತ್ತೀಚೆಗೆ ಚೀನಾದಲ್ಲಿ ನಡೆದ 19ನೇ ಏಷಿಯನ್ ಗೇಮ್ಸ್ ಪಂದ್ಯದಲ್ಲಿ ಪದಕಗಳನ್ನು ಪಡೆದ ಕ್ರೀಡಾಪಟುಗಳಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

## ಇಸ್ರೇಲ್ : ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ

ಲಂಡನ್, ಅ. 18 - ಹಮಾಸ್ ಹಾಗೂ ಇಸ್ರೇಲ್ ನಡುವಿನ ಸಮರ ಅಪಾರ ಸಾವು ನೋವುಗಳಿಗೆ ಕಾರಣವಾಗುತ್ತಿರುವ ನಡುವೆ ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆಯ ಕುರಿತ ಚರ್ಚೆಗಳೂ ಆರಂಭವಾಗಿವೆ. ವಿಶ್ವ ಸಂಸ್ಥೆಯು ಎರಡೂ ಕಡೆಗಳ ಯುದ್ಧಾಪರಾಧಗಳ ಸಾಕ್ಷಿಗಳನ್ನು ಸಂಗ್ರಹಿಸುತ್ತಿದೆ.

ಯುದ್ಧದ ಕಾರ್ಮೋಡದ ನಡುವೆ ಅಂತರರಾಷ್ಟ್ರೀಯ ಕಾನೂನುಗಳ ಜಾರಿ ಸುಲಭದ ಮಾತಲ್ಲ. ಅದರಲ್ಲೂ ಯಾರು ತಪ್ಪು ಮಾಡಿದ್ದಾರೆ ಎಂಬ ಸಾಕ್ಷಿಗಳ ಸಂಗ್ರಹ ಕಠಿಣವಾಗಿದೆ.

ವಿಶ್ವಸಂಸ್ಥೆಯ ಒಡಂಬಡಿಕೆ ಸೇರಿದಂತೆ ಹಲವಾರು ಅಂಶಗಳು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳಲ್ಲಿವೆ. ಎರಡನೇ ವಿಶ್ವ ಸಮರದ ನಂತರ ರೂಪಿಸಲಾದ ಜಿನೇವಾ ಒಡಂಬಡಿಕೆಗೆ ಬಹುತೇಕ ಎಲ್ಲ ದೇಶಗಳು ತಮ್ಮತಿಸಿವೆ.

ಈ ಒಪ್ಪಂದದಲ್ಲಿ ನಾಗರಿಕರು, ಗಾಯಗೊಂಡವರು ಹಾಗೂ ಬಂಧಿತರ ಜೊತೆ ಮಾನವೀಯವಾಗಿ ನಡೆದುಕೊಳ್ಳುವುದು ಸೇರಿದೆ. ಹತ್ಯೆ, ಹಿಂಸೆ, ಒತ್ತೆಯಾಳು, ಅಮಾನವೀಯ ನಡುವಳಿಕೆ ಇತ್ಯಾದಿಗಳನ್ನು ನಿಷೇಧಿಸಲಾಗಿದೆ. ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಾಲಯ ಈ ಕೃತ್ಯಗಳ ಬಗ್ಗೆ ನಿರ್ಧರಿಸುವ ಅಧಿಕಾರ ಹೊಂದಿದೆ.

**ಹಮಾಸ್‌ನಿಂದ ಉಲ್ಲಂಘನೆ :** ಅಕ್ಟೋಬರ್ 7ರಂದು ಹಮಾಸ್ ಸಂಘಟನೆಯು ಇಸ್ರೇಲ್ ಮೇಲೆ ನೂರಾರು ರಾಕೆಟ್‌ಗಳನ್ನು ಸಿಡಿಸಿದೆ. ಸಂಘಟನೆಯ (2ನೇ ಪುಟಕ್ಕೆ)



ಯುದ್ಧದ ಕಾರ್ಮೋಡದ ನಡುವೆ ಸಾಕ್ಷಿಗಳ ಸಂಗ್ರಹ

## ಪಠ್ಯದಲ್ಲಿ ಸಂಗೀತಕ್ಕೆ ಮನ್ನಣೆ ಇದ್ದರೆ ಮಕ್ಕಳ ಮನಸ್ಸು ತಿಳಿ

### ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ತರಳಬಾಳು ಜಗದ್ಗುರುಗಳ ಅಭಿಮತ



ಸಿರಿಗೆರೆ, ಅ. 18- ಸರ್ಕಾರವು ರಾಜ್ಯಾದ್ಯಂತ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಪಠ್ಯದಲ್ಲಿ ಕಡ್ಡಾಯವಾಗಿ ಯೋಗ ಶಿಕ್ಷಣದ ಜೊತೆಗೆ ಸಂಗೀತ, ನೃತ್ಯಕ್ಕೂ ಹೆಚ್ಚಿನ ಮನ್ನಣೆ ನೀಡಿದರೆ ಮಕ್ಕಳ ಮನಸ್ಸು ತಿಳಿಯಾಗಿ ಹದಗೊಳ್ಳುತ್ತದೆ ಎಂದು ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಅಭಿಪ್ರಾಯಪಟ್ಟರು.

ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಹಾಗೂ ಚಿತ್ರದುರ್ಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 14, 17 ವರ್ಷ ವಯೋಮಿತಿ ಯೊಳಗಿನ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಬಾಲಕ-ಬಾಲಕಿಯರ ಬೆಂಗಳೂರು ವಿಭಾಗ ಮಟ್ಟದ ಹಾಗೂ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಗಳು ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಅ. 18ರಿಂದ 20ರವರೆಗೆ ನಡೆಯಲಿದ್ದು, ಬುಧವಾರ ಈ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ, ಮಾತನಾಡಿದರು.

ಯೋಗದಿಂದ ಏಕಾಂತತೆ, ಶಿಸ್ತು ಮೂಡುತ್ತದೆ. ಆದ್ದರಿಂದ ಪಠ್ಯಕ್ರಮದ ವ್ಯವಸ್ಥೆ ಬದಲಾವಣೆಯಾಗಿ ಯೋಗ ಶಿಕ್ಷಣವನ್ನು ಸೇರ್ಪಡೆ ಮಾಡಬೇಕಾಗಿದೆ ಎಂದು ತಿಳಿಸಿದರು.

ಪತಂಜಲಿಯ ಯೋಗ ಸೂತ್ರದಲ್ಲಿ ಯೋಗ ಎಂದರೆ ಕೇವಲ ಆಸನಗಳೇ ಯೋಗ ಅಲ್ಲ. ಆಸನಗಳು ಯೋಗದ ಒಂದು ಭಾಗ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಸಮಾಧಿ ಎಂಬ ಅಷ್ಟಾಂಗ ಸೂತ್ರವನ್ನು ರಾಜಯೋಗವೂ ವಿವರಿಸಿದಂತೆ ಯೋಗಾಸನವು ಶರೀರ ಮತ್ತು ಮನಸ್ಸಿಗೆ ಬಹಳ ಹತ್ತಿರದ ಸಂಬಂಧ ಹೊಂದಿದೆ. ಯೋಗಾಸನವು ಮನಸ್ಸನ್ನು ಹತೋಟಿಗೆ ತರಲು ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಕಾರಿ. ಯೋಗದಿಂದ ಶರೀರವನ್ನು ಹೇಗೆ ಪಳಗಿಸಬಹುದೋ ಹಾಗೆ ಮನಸ್ಸನ್ನು ಪಳಗಿಸು ವುದು ಮುಖ್ಯ ಎಂದು ಶ್ರೀಗಳು ಹೇಳಿದರು.

ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ನಮ್ಮ ತರಳಬಾಳು ಕಲಾ ಸಂಘದ ಮಕ್ಕಳು ಮಲ್ಲಕಂಬ, ಮಲ್ಲಿಹಗ್ಗ ಮುಂತಾದ ಕಾರ್ಯಕ್ರಮಗಳ ಪ್ರದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ವಿಧಾನಪರಿಷತ್‌ನ ಕೆ.ಎಸ್.ನವೀನ್ ಮಾತನಾಡಿ, ಯೋಗವು ಇಂದು ವಿಶ್ವ ಮಟ್ಟದಲ್ಲಿ ಹೆಸರು ಮಾಡುತ್ತದೆ. 150 ದೇಶಗಳು ಯೋಗವನ್ನು ಸಂಪೂರ್ಣವಾಗಿ ಒಪ್ಪಿದ್ದಾರೆ. ಇದಕ್ಕೆ ಭಾರತ ಕೊಡುಗೆ ಅನನ್ಯ. ಯಾರು ಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡುತ್ತಾರೋ ಅವರ ಮನಸ್ಸು ಮತ್ತು ದೇಹ ಎರಡೂ ಸಹ ನಿಯಂತ್ರಣದಿಂದ ಇರಲು ಸಾಧ್ಯ. ಯೋಗ ಒಂದು ರೋಮಾಂಚನಕಾರಿಯಾದ ಕಾರ್ಯಕ್ರಮ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಎಂ. ಚಂದ್ರಪ್ಪ, ಯೋಗ ಒತ್ತಡವನ್ನು ಕಡಿಮೆ ಮಾಡುತ್ತದೆ. ವಿರಾಮವಿಲ್ಲದ ಕೆಲಸದ ನಂತರ ನೀವು ಯೋಗ ಮಾಡಿದರೆ (2ನೇ ಪುಟಕ್ಕೆ)

|| ಶ್ರೀ ಸೂಳೆಕೆರೆ ಸಿದ್ದೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಜಿ. ಚನ್ನಗಿರಿ ತಾ. ನಲ್ಕುದುರೆ ಗ್ರಾಮದ ವಾಸಿಗಳಾದ
ಶ್ರೀಮತಿ ಹಾಲಮ್ಮ ಮತ್ತು ಮಕ್ಕಳು
ಇವರುಗಳು ಮಾಡುವ ವಿಜ್ಞಾಪನೆಗಳು
ಶರಣ ಬಂಧುಗಳೇ,
ದಿನಾಂಕ : 12.10-2023ನೇ ಗುರುವಾರ
ಬೆಳಗಿನ ಜಾವ 03.05ಕ್ಕೆ ನನ್ನ ಪೂಜ್ಯ ಪತಿಯವರಾದ
**ಶರಣ ಹಂಚಿನಮನೆ ಗೌಡ್ರು ಹೆಚ್.ವಿ. ಸಿದ್ದಪ್ಪ**
(ನಿವೃತ್ತ ಮುಖ್ಯ ಶಿಕ್ಷಕರು)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 20.10.2023ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ
ಶ್ರೀ ವೀರಭದ್ರೇಶ್ವರ ಸಮುದಾಯ ಭವನ, ನಲ್ಕುದುರೆ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಹಾಲಮ್ಮ ಮತ್ತು ಮಕ್ಕಳು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಹಂಚಿನಮನೆ ವಂಶಸ್ಥರು, ಮೂಲೆಮನೆ ವಂಶಸ್ಥರು, ನಲ್ಕುದುರೆ ಹಾಗೂ ಬಂಧು-ಮಿತ್ರರು. 76763 62865, 84960 53737
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ಸರ್ಕಾರಿ ಆಸ್ಪತ್ರೆ ವೈದ್ಯರು ನಿರ್ಲಕ್ಷ್ಯ ವಹಿಸದೇ ಸೇವೆ ಮಾಡಬೇಕು



**ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ದೇವೇಂದ್ರಪ್ಪ ಕಿವಿಮಾತು**

ಜಗಳೂರು, ಅ.18- ರೋಗಿಗಳ ಪಾಲಿಗೆ ವೈದ್ಯರು ಸಾಕ್ಷಾತ್ ದೇವರುಗಳಿದ್ದಂತೆ. ಸರ್ಕಾರಿ ಆಸ್ಪತ್ರೆ ವೈದ್ಯರು ನಿರ್ಲಕ್ಷ್ಯವಹಿಸದೇ ಸೇವೆ ಮಾಡಿ ಎಂದು ಶಾಸಕ ಬಿ.ದೇವೇಂದ್ರಪ್ಪ ಕಿವಿಮಾತು ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡುವೆ. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳು ನಿರ್ಲಕ್ಷ್ಯ ವಹಿಸದೇ ಕರ್ತವ್ಯ ದ್ರೋಹವೆಸಗಬೇಡಿ.ತಮಗೆ ಸದಾ ಸಹಕಾರವಿದೆ. ಆಸ್ಪತ್ರೆಯಲ್ಲಿನ ಕುಂದು ಕೊರತೆಗಳನ್ನು ಮುಕ್ತವಾಗಿ ನನ್ನ ಬಳಿ ಚರ್ಚಿಸಬೇಕು. ಅಗತ್ಯ ಸೌಲಭ್ಯಗಳನ್ನು ಸರಕಾರದಿಂದ ಒದಗಿಸಲಾಗುವುದು ಎಂದರು.

ವೈದ್ಯ ವೃತ್ತಿ ವಿಶಿಷ್ಟವಾದದ್ದು. ಸಾವಿನಂಚಿನಲ್ಲಿರುವ ರೋಗಿಯನ್ನು ಬದುಕಿಸುವ, ಆತ್ಮಸ್ಥೈರ್ಯ ತುಂಬುವ ಕಲೆ ನಿಮ್ಮಲ್ಲಿದೆ. ಕೆಲ ವರ್ಷಗಳ ಹಿಂದೆ ನನ್ನ ಇಬ್ಬರು ಪುತ್ರರು ಆರೋಗ್ಯ ಸೇವೆಯಲ್ಲಿ ತೊಡಗಿದ್ದು ತೃಪ್ತಿ ತಂದಿದೆ. ವೃತ್ತಿ ಗೌರವದ ಬಗ್ಗೆ ಕೀಳರಿಮೆ ಸಲ್ಲದು. ತಮ್ಮ ಸೇವೆಗೆ ಪ್ರತಿಫಲ ಸಿಗುತ್ತದೆ ಎಂದರು.

**ಚಿಕ್ಕಮ್ಮನಹಟ್ಟಿ ವೃದ್ಧನ ಸಾವಿಗೆ ಸ್ಪಷ್ಟನೆ:** ಇತ್ತೀಚೆಗೆ ಚಿಕ್ಕಮ್ಮನಹಟ್ಟಿ ಗ್ರಾಮದ ವೃದ್ಧನ ಸಾವಿನ ಬಗ್ಗೆ ವೈದ್ಯರ ನಿರ್ಲಕ್ಷ್ಯ ಎಂದು ನಡೆಸಿದ ಪ್ರತಿಭಟನೆ ಕುರಿತು ಡಾ.ಸವಿತಾ ಅವರು ಪ್ರತಿಕ್ರಿಯಿಸಿ, ನಾನು ಒಪಿಡಿ ಕರ್ತವ್ಯದಲ್ಲಿದ್ದೆ, ಹೊರರೋಗಿಯಾಗಿ ಆಗಮಿಸಿದ್ದರು. ಆಗ ನಾನು ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ದಾವಣಗೆರೆ ಆಸ್ಪತ್ರೆಗೆ ರೆಫರ್ ಮಾಡಿದ್ದೆವು. ಆದರೆ ಹಠದಿಂದ ಇಲ್ಲೇ ಉಳಿದು ಕೊಂಡರು, ದಾಖಲಾಗಿರಲಿಲ್ಲ. ಸಮಯ ಸಕಾಲದಲ್ಲಿ ಹೋಗದೆ ವಿಳಂಬ ಮಾಡಿದ್ದರಿಂದ ಸಾವನ್ನಪ್ಪಿದರು. ಇದರಲ್ಲಿ ನಮ್ಮ ತಪ್ಪೇನೂ ಇಲ್ಲ. ನನ್ನ ಮೇಲೆ ವಿನಾಕಾರಣ ಆರೋಪ ಮಾಡಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಆಡಳಿತ ವೈದ್ಯಾಧಿಕಾರಿ ಡಾ. ಷಣ್ಮುಖಪ್ಪ ಮಾತನಾಡಿ, ವೈದ್ಯರ ಕೊರತೆಯಿದ್ದು, ಇರುವವರನ್ನೇ ರಾತ್ರಿ, ಹಗಲು ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. ಡಯಾಗ್ನೋಸ್ಟಿಕ್, ರೇಡಿಯಸ್, ಲ್ಯಾಬೋರೇಟರಿ ಯಂತ್ರೋಪಕರಣಗಳಿದ್ದು, ಟೆಕ್ನೀಷಿಯನ್ ಕೊರತೆಯಿದೆ ಎಂದು ಮಾಹಿತಿ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಲೇರಿಯಾ ವೈದ್ಯಾಧಿಕಾರಿ ಡಾ. ನಟರಾಜ್, ಟಿಎಚ್‌ಓ ಡಾ.ವಿಶ್ವನಾಥ್, ಡಾ.ಸಂಜಯ್, ಡಾ.ಸವಿತಾ, ಡಾ.ಅಶ್ವಿನಿ, ಡಾ.ಜಗನ್ನಾಥ್, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಗೌಸ್‌ಪೀರ್ ಸೇರಿದಂತೆ ಸಿಬ್ಬಂದಿಗಳು ಇದ್ದರು.

# ಜನತೆ ನೆಮ್ಮದಿ ಜೀವನ ನಡೆಸುವ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನ



**ಭರಮಸಾಗರದಲ್ಲಿ ಅಬಕಾರಿ ಸಚಿವ ಆರ್. ಬಿ ತಿಮ್ಮಾಪುರ**

ಭರಮಸಾಗರ, ಅ.18- ರಾಜ್ಯದಲ್ಲಿ ಬರದ ಪರಿಸ್ಥಿತಿ ನಿಭಾಯಿಸುವಲ್ಲಿ ಮುಂದಾಗಿದ್ದು, ಹಿಂದುಳಿದ ವರ್ಗ ಮತ್ತು ಮಧ್ಯಮ ವರ್ಗದ ಜನರು ನೆಮ್ಮದಿಯ ಜೀವನ ನಡೆಸುವ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ಹೇಳಿದರು.

ಭರಮಸಾಗರದಲ್ಲಿ ಸ್ಥಳೀಯ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಇಲಾಖೆಯಲ್ಲಿ ಬಹಳ ದಿನದಿಂದ ಭ್ರಷ್ಟಾಚಾರ ನಡೆಯುತ್ತಿದೆ ಅದಕ್ಕೆ ಹಂತ ಹಂತವಾಗಿ ಕಡಿವಾಣ ಹಾಕಿ ಸುಧಾರಣೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ನಮ್ಮ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಜಾರಿಯಿಂದ ರಾಜ್ಯದ ಜನತೆ ಖುಷಿಯಾಗಿದ್ದಾರೆ.

ಗ್ರಾಮ ಪಂಚಾಯ್ತಿಗೆ ಒಂದರಂತೆ ಹೊಸದಾಗಿ ಬಾರ್ ತೆರೆಯಲು ಅಧಿಕಾರಿಗಳ ಹತ್ತಿರ ಚರ್ಚೆ ಮಾಡಲಾಗಿತ್ತು ಸುಮಾರು 50-60 ಬಾರ್ ಲೈಸನ್ಸ್ ಬೇನಾಮಿಯಾಗಿ ನಡೆಯುತ್ತಿವೆ. ಹೊಸದಾಗಿ ಮದ್ಯದ ಅಂಗಡಿ ತೆರೆಯಲು ಅನುಮತಿ ಕೊಡುವುದಿಲ್ಲ ಎಂದು ಮುಖ್ಯ ಮಂತ್ರಿಗಳೇ ಹೇಳಿದ್ದಾರೆ ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಪ್ರಧಾನ ಕಾರ್ಯದರ್ಶಿ ವಿನಯ್ ತಿಮ್ಮಾಪುರ್, ಕೆ.ಪಿ.ಸಿ.ಸಿ ಸದಸ್ಯ ಹೆಚ್.ಎನ್ ತಿಪ್ಪೇಸ್ವಾಮಿ, ಮುಖಂಡರಾದ ಎಮ್ಮೆಹಟ್ಟಿ ಆರ್ ಕೃಷ್ಣಮೂರ್ತಿ, ನಾಗೇಂದ್ರಪ್ಪ, ಶಮೀಮ್ ಪಾಷ, ಓಬಜ್ಜ, ಸಿ.ಟಿ ಮಹಾಂತೇಶ್, ಅಬ್ಬಾಸ್ ಹಫೀಜ್, ಪ್ರಕಾಶ್, ರಘು ಟಿ.ಆರ್ ಚನ್ನೇಶ್, ಹೆಚ್.ಎನ್. ನೀಲಪ್ಪ ವೆಂಕಟೇಶ್, ಲಿಂಗರಾಜ್, ಕೆ.ಟಿ.ಸಿ ಮಂಜು, ಶ್ರೀನಿವಾಸ್, ಸಂತೋಷ್, ಪತ್ರಕರ್ತ ಬಿ.ಜೆ ಅನಂತಪದ್ಮನಾಭರಾವ್, ಶಿವಪ್ರಸಾದ್, ರಾಜು, ಮಂಜಣ್ಣ, ಕರಿಬಸಪ್ಪ ಮತ್ತಿತರರು ಹಾಜರಿದ್ದರು.

# ಪರಿಸ್ಥಿತಿ ಒಪ್ಪಿಕೊಳ್ಳಿ, ಯೋಚಿಸಿ ಪ್ರತಿಕ್ರಿಯಿಸಿ

**(1ನೇ ಪುಟದಿಂದ)** ಸಂಚಾರವನ್ನು ನಿಯಂತ್ರಿಸುವ ರೀತಿಯಲ್ಲೇ ಮನಸ್ಸಿನ ಆಲೋಚನೆಗಳನ್ನೂ ಸರಿಯಾಗಿ ನಿಯಂತ್ರಿಸಬೇಕಿದೆ. ಇದಕ್ಕಾಗಿ ಧ್ಯಾನದ ಅಭ್ಯಾಸ ಮಾಡುವುದು ಸೂಕ್ತ. ಪ್ರತಿದಿನ ಬೆಳಿಗ್ಗೆ ಸಶಕ್ತವಾದ ಹಾಗೂ ಉತ್ತಮ ಆಲೋಚನೆಗಳನ್ನು ಮಾಡುವ ಅಭ್ಯಾಸದಿಂದ ಒತ್ತಡ ತಗ್ಗಿಸಲು ಸಾಧ್ಯವಾಗುತ್ತದೆ ಎಂದವರು ಹೇಳಿದರು. ದೇಶ ನಿರ್ಮಾಣವಾಗಬೇಕಾದರೆ ಮೊದಲು ಕುಟುಂಬ ನಿರ್ಮಾಣವಾಗಬೇಕು. ಕುಟುಂಬ ನಿರ್ಮಾಣವಾಗಬೇಕಾದರೆ ಮೊದಲು ವ್ಯಕ್ತಿಯ ನಿರ್ಮಾಣವಾಗಬೇಕು ಎಂದು ಕನ್ಫ್ಯೂಷಿಯಸ್ ಹೇಳಿದ್ದರು. ಹೀಗಾಗಿ ವ್ಯಕ್ತಿಗಳು ಒತ್ತಡ ಮುಕ್ತವಾದಾಗ ದೇಶವೂ ಪ್ರಗತಿ ಸಾಧಿಸಲು ಸಾಧ್ಯ ಎಂದು ನುಡಿದರು.

ಮನಸ್ಸು ಒತ್ತಡಕ್ಕೆ ಸಿಲುಕುವುದು ಸಹಜ. ಒತ್ತಡ ಇರುವುದನ್ನು ಮೊದಲು ಒಪ್ಪಿಕೊಳ್ಳಬೇಕು. ನಂತರ ಸಕಾರಾತ್ಮಕ ಮನೋಭಾವದಿಂದ ಒತ್ತಡ ನಿವಾರಣೆಯ ಸೂತ್ರಗಳನ್ನು ಪಾಲಿಸಬೇಕು. ಈ ದಿಸೆಯಲ್ಲಿ ಪ್ರಾಮಾಣಿಕತೆ ಹಾಗೂ ಆತ್ಮಾವಲೋಕನ ಇರಬೇಕು ಎಂದು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಮಾತನಾಡಿ, ಬದುಕನ್ನು ಒಬ್ಬೊಬ್ಬರೂ ಒಂದೊಂದು ರೀತಿ ಅರ್ಥೈಸುತ್ತಾರೆ. ಎಲ್ಲರೂ ತಮ್ಮ ಬದುಕಿನಲ್ಲಿ ಬಂದದ್ದನ್ನು ಸ್ವೀಕರಿಸುವ ಮನೋಭಾವ ಮೈಗೂಡಿಸಿಕೊಳ್ಳಬೇಕಿದೆ ಎಂದರು.

ನ್ಯಾಯಾಧೀಶರ ಕೆಲಸವೂ ಒತ್ತಡದಿಂದ ಹೊರತಾಗಿಲ್ಲ. ನಾನೂ ಸಹ ಕಾರ್ಯಕ್ರಮಕ್ಕೆ ಬರುವಾಗ ಒತ್ತಡದಲ್ಲಿದ್ದೆ. ಇಲ್ಲಿಗೆ ಬಂದು ಆಶಾದೀದೀ ಅವರ ಮಾತು ಕೇಳಿದ ಮೇಲೆ ಒತ್ತಡ ನಿಭಾಯಿಸುವ ಶಕ್ತಿ ಬಂದಂತಾಗಿದೆ ಎಂದರು.

ಮನೋರಂಜನಾ ಕಾರ್ಯಕ್ರಮಗಳಿಗಷ್ಟೇ ಹೆಚ್ಚು ಜನರು ಸೇರುವ ಈ ದಿನಗಳಲ್ಲಿ ಈ ಕಾರ್ಯಕ್ರಮಕ್ಕೆ ಆಗಮಿಸಿರುವ ಜನರ ಸಂಖ್ಯೆ ಇದರ ಸಾರ್ಥಕತೆ ತೋರಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಾವಣಗೆರೆ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಮಾತನಾಡುತ್ತಾ, ಇತ್ತೀಚೆಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳೂ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿದ್ದಾರೆ ಇದರಿಂದ ಮದ್ಯಪಾನ, ಡ್ರಗ್ಸ್ ವ್ಯಸನಿಗಳಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈಶ್ವರೀಯ ವಿದ್ಯಾಲಯದಿಂದ ಶಾಲಾ-ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮ ಗಳನ್ನು ಆಯೋಜಿಸುವಂತೆ ಸಲಹೆ ನೀಡಿದರು.

ಜಿ.ಎಂ. ವಿಶ್ವವಿದ್ಯಾನಿಲಯದ ಡೀನ್ ಪ್ರೊ.ಜಿ.ಎಂ. ಪಾಟೀಲ್, ಶಿಕ್ಷಣ ಹಾಗೂ ಸಂಸ್ಕಾರ ವಿದ್ಯಾರ್ಥಿಗಳಿಗೆ ತಳಮಟ್ಟದಲ್ಲಿಯೇ ಸಿಕ್ಕರೆ ಅವರ ಜೀವನ ಭದ್ರವಾಗಿರುತ್ತದೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಅಥಣಿ ಎಸ್. ವೀರಣ್ಣ ಮಾತನಾಡಿ, ಅಹಂಕಾರ, ಪ್ರತಿಷ್ಠೆಗಳ ಪರಿಣಾಮ ಒತ್ತಡವನ್ನು ನಾವಾಗಿಯೇ ಆಹ್ವಾನಿಸಿಕೊಳ್ಳುತ್ತಿದ್ದೇವೆ. ಒತ್ತಡ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸುವ ಬ್ರಹ್ಮಾಕುಮಾರಿ ಸಂಸ್ಥೆಯ ಕಾರ್ಯಕ್ರಮವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಅವರು ಮಾತನಾಡಿ, ಮಾನವರಾಗಿ ಹುಟ್ಟಿರುವ ನಾವು, ಸುಖವಾಗಿ ಬಾಳಬೇಕಾದರೆ ಒತ್ತಡ ಮುಕ್ತ ಜೀವನ ಅತ್ಯಗತ್ಯ ಎಂದರು.

ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜೀ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈಶ್ವರೀಯ ವಿವಿ ದಾವಣಗೆರೆ ಸಂಚಾಲಕರಾದ ಬ್ರಹ್ಮಾಕುಮಾರಿ ಲೀಲಾಜಿ ಸ್ವಾಗತಿಸಿದರು. ಶಿರಸಿ ಸೇವಾ ಕೇಂದ್ರದ ಸಂಚಾಲಕರಾದ ಬ್ರಹ್ಮಾಕುಮಾರಿ ವೀಣಾಜಿ ನಿರೂಪಿಸಿದರು. ಮಲೇಬೆನ್ನೂರು ಸೇವಾ ಕೇಂದ್ರದ ಸಂಚಾಲಕರಾದ ಬ್ರಹ್ಮಾಕುಮಾರಿ ಮಂಜುಳಾಜಿ ವಂದಿಸಿದರು.

# ಎರಡು ದೇಶಗಳ ಸೂತ್ರಕ್ಕೆ ಅಮೆರಿಕ ಬೆಂಬಲ : ಪ್ಯಾಲೆಸ್ತೇನ್‌ಗೆ 100 ದಶಲಕ್ಷ ಡಾಲರ್ ನೆರವು

ಟೆಲ್ ಅವೀವ್, ಅ. 18 – ಇಸ್ರೇಲ್ ಹಾಗೂ ಪ್ಯಾಲೆಸ್ತೇನಿನ ಜನರು ಸುರಕ್ಷಿತವಾಗಿ ಹಾಗೂ ಗೌರವಯುತವಾಗಿ ಬದುಕುವಂತಾಗಲು ಎರಡು ದೇಶಗಳ ಸೂತ್ರಕ್ಕೆ ಬೆಂಬಲಿಸುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಹೇಳಿದ್ದಾರೆ.

ಸಮರ ಪೀಡಿತ ಗಾಜಾ ಹಾಗೂ ಪಶ್ಚಿಮ ದಂಡೆಗಳಿಗೆ 100 ದಶಲಕ್ಷ ಡಾಲರ್ ಮಾನವೀಯ ನೆರವು ನೀಡುವುದಾಗಿಯೂ ಅವರು ತಿಳಿಸಿದ್ದಾರೆ.

ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಭೇಟಿ ಮಾಡಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

ಈಜಿಪ್ಟ್ ಕಡೆಯಿಂದ ಗಾಜಾಗೆ ಮಾನವೀಯ ನೆರವಿಗೆ ಅವಕಾಶ ನೀಡುವುದಕ್ಕೆ ಇಸ್ರೇಲ್ ಸಮ್ಮತಿಸಿದೆ ಎಂದೂ ಅವರು ಹೇಳಿದ್ದಾರೆ. ಆದರೆ, ಈ ನೆರವು ನಾಗರಿಕರಿಗೆ ತಲುಪಬೇಕೇ ಹೊರತು ಹಮಾಸ್ ಉಗ್ರರಿಗೆ ಅಲ್ಲ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದೂ ಅವರು ಹೇಳಿದ್ದಾರೆ.

# ರಾಗಿಗುಡ್ಡ ಪ್ರವೇಶಕ್ಕೆ ನಿಷೇಧ

**(1ನೇ ಪುಟದಿಂದ)** ಹೇಳಿದರು.

ಸುದ್ಧಿಗೋಷ್ಠಿಯಲ್ಲಿ ಶ್ರೀರಾಮ ಸೇನೆಯ ಪದಾಧಿಕಾರಿಗಳಾದ ಮಣಿ ಸರ್ಕಾರ್, ಪರಶುರಾಮ್ ನಡುಮನಿ, ಬಿ.ಜಿ. ರಾಹುಲ್, ಅನಿಲ್ ಸುರ್ವೆ, ಶ್ರೀಧರ್, ಮಧು, ಸಿದ್ಧಾರ್ಥ, ಶ್ರೀಧರ್, ವಿನಯ್ ಮತ್ತಿತರರು ಉಪಸ್ಥಿತರಿದ್ದರು.

**'ಮೋದಿ ಗೆಲ್ಲಿಸಿ, ದೇಶ ಉಳಿಸಿ' ಅಭಿಯಾನಕ್ಕೆ ಸಿದ್ಧತೆ**

ಭಾರತ ದೇಶಕ್ಕೆ ಮೋದಿ ಆಡಳಿತ ಅತ್ಯವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ 'ಮೋದಿ ಗೆಲ್ಲಿಸಿ, ದೇಶ ಉಳಿಸಿ' ಅಭಿಯಾನವನ್ನು ಕರ್ನಾಟಕದ 224 ವಿಧಾನ ಸಭಾ ಕ್ಷೇತ್ರಗಳಲ್ಲಿ ನಡೆಸಲಾಗುವುದು ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿದರು. ಅಭಿಯಾನದ ಅಂಗವಾಗಿ ರ‍್ಯಾಲಿ, ವಿಚಾರ ಸಂಕಿರಣ, ಸಂವಾದಗಳನ್ನು ಸಹ ಆಯೋಜಿಸಲಾಗುವುದು ಎಂದರು.

# ಗೋವಿನಹಾಳ್ : ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧರ್ಮಸ್ಥಳದ ನೆರವು



ಮಲೇಬೆನ್ನೂರು, ಅ.18- ಗೋವಿನಹಾಳ್ ಗ್ರಾಮದ ಶ್ರೀ ಗಂಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಡಾ. ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿರುವ 1 ಲಕ್ಷ ರೂ.ಗಳ ಡಿಡಿಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಅವರು ಮಂಗಳವಾರ ದೇವಸ್ಥಾನ ಸಮಿತಿಯವರಿಗೆ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಬಸವರಾಜಪ್ಪ ದೇವಸ್ಥಾನ ಸಮಿತಿ ಅಧ್ಯಕ್ಷ ಚಂದ್ರಪ್ಪ, ಉಪಾಧ್ಯಕ್ಷ ಹನುಮಂತಪ್ಪ, ಕೊಕ್ಕನೂರು ಒಕ್ಕೂಟದ ಅಧ್ಯಕ್ಷ ಹನುಮಂತರಾಯ, ಮಹಿಳಾ ಒಕ್ಕೂಟದ ಅಧ್ಯಕ್ಷೆ ಪವಿತ್ರ, ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಕುಲಾಲ್, ಕೊಕ್ಕನೂರು ವಲಯ ಮೇಲ್ವಿಚಾರಕರಾದ ರಂಜಿತಾ, ಎಂ.ಎನ್.ಹಳ್ಳಿ ವಲಯ ಮೇಲ್ವಿಚಾರಕರಾದ ರಕ್ಷಿತಾ ಮತ್ತು ಗ್ರಾಮದ ಸೇವಾ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

# ಕೊಟ್ಟೂರು : ಆಯುಷ್ಮಾನ್ ಭವ ಆರೋಗ್ಯ ಶಿಬಿರ



ಕೊಟ್ಟೂರು, ಅ. 18- ಸಮುದಾಯ ಆರೋಗ್ಯ ಕೇಂದ್ರ ಉಜ್ಜಿನಿಯಲ್ಲಿ ಆಯುಷ್ಮಾನ್ ಭವ ಆರೋಗ್ಯ ಶಿಬಿರ ಆಯೋಜಿಸಲಾಗಿತ್ತು. ಗ್ರಾ.ಪಂ. ಅಧ್ಯಕ್ಷರಾದ ನಿಂಗಮ್ಮ ಮಾರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ತಾಲ್ಲೂಕು ವೈದ್ಯಾಧಿಕಾರಿ ಡಾ. ಪ್ರದೀಪ್ ಅವರು ಆಯುಷ್ಮಾನ್ ಭವ ಆರೋಗ್ಯ ಶಿಬಿರದಲ್ಲಿ ಸಿಗುವಂತಹ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಪುಷ್ಪಲತಾ ರೇವಣಸಿದ್ದಪ್ಪ, ಮಂಜುನಾಥ, ನಾಗೇಂದ್ರಪ್ಪ ಆಯುಷ್ಮಾನ್ ಆರೋಗ್ಯ ಮೇಳದಲ್ಲಿ ನುರಿತ ವೈದ್ಯಾಧಿಕಾರಿಗಳಾದ ಡಾ. ನಿರಂಜನ್, ಡಾ. ರವಿಕುಮಾರ್, ಡಾ. ಮನ್ಸೂರ್ ಅಹ್ಮದ್, ಡಾ. ರಾಜಶೇಖರ್, ಡಾ. ಲಕ್ಷ್ಮಿ, ಡಾ. ರೇಣುಕಾ, ಡಾ. ಆಕಾಶ್, ಶಿಬಿರವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಜೆ.ಎಂ. ಮರುಳಾರಾಧ್ಯ ಕಾರ್ಯಕ್ರಮ ನಿರೂಪಿಸಿದರು.

# ಹೋಮ, ಯಾಗದಿಂದ ಪರಿಸರ ಶುದ್ದಿ, ರೋಗಗಳು ದೂರ



**ರಾಣೇಬೆನ್ನೂರಿನ ಶನೈಶ್ಚರ ಮಂದಿರದ ಶ್ರೀ ಶಿವಯೋಗಿ ಮಹಾಸ್ವಾಮೀಜಿ**

ರಾಣೆಬೆನ್ನೂರು, ಅ.18- ಸ್ಥಳೀಯ ಹಿರೇಮಠ ಶ್ರೀ ಶನೈಶ್ಚರ ಮಂದಿರದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಹೋಮ, ಪೂರ್ಣಾಹುತಿ, ತೈಲಾಭಿಷೇಕ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜೆಗಳು ಮುಂಜಾನೆಯಿಂದ ರಾತ್ರಿಯವರೆಗೂ ನಿರಂತರವಾಗಿ ನೆರವೇರಿದವು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶನೈಶ್ಚರ ಮಂದಿರದ ಶ್ರೀ ಶಿವಯೋಗಿ ಮಹಾಸ್ವಾಮಿಗಳು ಮಾತನಾಡಿ ಹೋಮ, ಯಾಗ ಮಾಡುವುದರಿಂದ ಪರಿಸರ ಶುದ್ಧಿಯಾಗುವುದು.ಮನುಜನಲ್ಲಿನ ರೋಗ-ರುಜಿನಗಳು ದೂರವಾಗುವವು, ಪರಿಸರದಲ್ಲಿನ ಕ್ರಿಮಿ-ಕೀಟಗಳು ನಾಶವಾಗುವವು. ಇದರಿಂದ ಮನುಷ್ಯನ ಹಾಗೂ ಆತನ ಕುಟುಂಬ ವರ್ಗದಲ್ಲಿ ಉತ್ತಮ ಆರೋಗ್ಯ ಕಂಡುಬರುವುದು ಎಂದರು.

ಮುಂಬರುವ ನವರಾತ್ರಿ ಸೇರಿದಂತೆ ದುರ್ಗೆ, ಚಕ್ರಪಾಣಿ ಮಹಾಮಾತೆಯ ಪೂಜೆ ಮಾಡುವುದರಿಂದ ಆಪತ್ತಿನಲ್ಲಿರುವವರನ್ನು ರಕ್ಷಿಸುತ್ತಾಳೆ. ಜಗತ್ತಿನ ಯೋಗ ಕ್ಷೇಮಗಳಿಗೆ ಕಾರಣಳಾಗುತ್ತಾಳೆ. ಭಕ್ತಿ, ಶ್ರದ್ದೆಗಳಿಂದ ಕುಂಕುಮಾರ್ಚನೆ ಮಾಡಿದರೆ ಆಯುಷ್ಯ ಹೆಚ್ಚಳವಾಗುತ್ತದೆ. ಪಂಚಾಕ್ಷರಿ ಜಪ ಮಾಡುವುದರಿಂದ ದುಃಖ, ನೋವುಗಳನ್ನು ದೂರ ಮಾಡಲು ಶಕ್ತಿ ಬರುತ್ತದೆ. ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಪಾಲ್ಗೊಳ್ಳುವುದರಿಂದ ಜೀವನ ಪಾವನವಾಗುತ್ತದೆ ಎಂದರು.

ಪುನೀತ, ಗುದ್ಲೇಶ್ವರ, ಪರಮೇಶ್ವರ ಸೇರಿದಂತೆ ಸ್ಥಳೀಯ ಶಾಸ್ತ್ರಿಗಳು, ಭಕ್ತರು ಹೋಮ, ಯಾಗ ಪೂಜೆಯಲ್ಲಿ ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ಶ್ರೀ ದೇವಿ ಪುರಾಣ

ಶ್ರೀ ಗುರು ಕಬೀರಾನಂದ ಸ್ವಾಮಿ ಸಿದ್ಧಾಶ್ರಮ, ಶ್ರೀ ಸಿದ್ಧಾರೂಢ ಮಠದಲ್ಲಿ ಶರನ್ನವರಾತ್ರಿ ಪ್ರಯುಕ್ತ ಇಂದು ಸಂಜೆ ಶ್ರೀ ದೇವಿ ಪುರಾಣ ನಡೆಯಲಿದೆ.

## ಗೋಧಿ ಬೆಂಬಲ ಬೆಲೆ 150 ರೂ. ಹೆಚ್ಚಳ

**(1ನೇ ಪುಟದಿಂದ)** ಪಡಿಸಲಾಗಿದೆ. ಸಾಸಿವೆ ಬೆಂಬಲ ಬೆಲೆಯನ್ನು 200 ರೂ. ಹೆಚ್ಚಿಸಿ 5,650 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಕುಸುಬೆ ಬೆಂಬಲ ಬೆಲೆಯನ್ನು 150 ರೂ. ಹೆಚ್ಚಿಸಿ 5,800 ರೂ.ಗಳಿಗೆ ನಿಗದಿ ಮಾಡಲಾಗಿದೆ.

## ಡಿಕೆಶಿ-ಜಾರಕಿಹೊಳಿ ಶೀತಲ ಸಮರ

**(1ನೇ ಪುಟದಿಂದ)** ಮುಖ್ಯಮಂತ್ರಿಗೆ ಮಾಹಿತಿ ನೀಡುತ್ತಿದ್ದಾರೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು. ಬಿಜೆಪಿಯವರು ಏನು ಆಫರ್ ಕೊಡುತ್ತಿದ್ದಾರೆ ಅನ್ನೋದನ್ನೂ ಹೇಳಿದ್ದಾರೆ. ನಮ್ಮ ಬಳಿ ಪ್ರತಿಯೊಂದು ಮಾಹಿತಿ ಇದೆ. ಯಾರನ್ನೆಲ್ಲ ಭೇಟಿಯಾಗಿದ್ದಾರೆ ಎಂಬುದನ್ನು ಅಧಿವೇಶನದಲ್ಲಿ ಹೇಳಿಸುತ್ತೇನೆ ಎಂದು ಹೇಳಿದರು.

## ಫಿನೋಲೆಕ್ಸ್ ಕೇಬಲ್ಸ್ ಪ್ರಕರಣ

**(1ನೇ ಪುಟದಿಂದ)** ಸಿ.ಎಲ್.ಎ.ಟಿ. ಮುಖ್ಯಸ್ಥ ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ಪೀಠ ವಿಚಾರಣೆಗೆ ಒಳಪಡಿಸಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಆದೇಶ ಹೊರಡಿಸಿರುವ ಸುಪ್ರೀಂ ಕೋರ್ಟ್ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ. ಎನ್.ಸಿ.ಎಲ್.ಎ.ಟಿ. ಎಷ್ಟು ಕೆಟ್ಟಿದೆ ಎಂಬುದನ್ನು ಈ ಪ್ರಕರಣ ತೋರಿಸುತ್ತದೆ. ಎನ್.ಸಿ.ಎಲ್.ಎ.ಟಿ. ಸದಸ್ಯರು ಸೂಕ್ತ ಮಾಹಿತಿ ಬಹಿರಂಗ ಪಡಿಸಲು ವಿಫಲವಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಸಂಗೀತಕ್ಕೆ ಮನ್ನಣೆ ಇದ್ದರೆ ಮಕ್ಕಳ ಮನಸ್ಸು ತಿಳಿ

**(1ನೇ ಪುಟದಿಂದ)** ಒತ್ತಡ ಕಡಿಮೆಯಾಗುವುದನ್ನು ಕಾಣಬಹುದು. ಯೋಗವು ಸಮಾಜದೊಳಗೆ ಇನ್ನಷ್ಟು ಅರಳಬೇಕಿದೆ. ಧ್ಯಾನದ ಮೂಲಕ ಮನಸ್ಸನ್ನು ಸಕಾರಾತ್ಮಕವಾಗಿ ಅಣಿಗೊಳ್ಳಿಸಬಹುದು ಎಂದರು. ಮಲ್ಲಗಂಬ ಪ್ರದರ್ಶಿಸಿದ ಬಾಲಕರಿಗೆ ಹಾಗೂ ಮಲ್ಲಿಹಗ್ಗ ಪ್ರದರ್ಶಿಸಿದ ಬಾಲಕಿಯರಿಗೆ ಬಹುಮಾನವಾಗಿ ಶಾಸಕ ಎಂ. ಚಂದ್ರಪ್ಪ ತಲಾ 5 ಸಾವಿರ ರೂ. ನೀಡಿದರು.

ಕಾರ್ಯಕ್ರಮದಲ್ಲಿ ಸಿ.ಇ.ಟಿ ಸಹ ನಿರ್ದೇಶಕರಾದ ಟಿ.ಜಿ. ಲೀಲಾವತಿ, ಜಿಲ್ಲಾ ದೈಹಿಕ ಶಿಕ್ಷಣಾಕಾರಿ ಎ. ಪರಶುರಾಮಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ನಾಗಭೂಷಣ್, ಡಿಡಿಪಿಐ ಕಚೇರಿಯ ಸಮಗ್ರ ಶಿಕ್ಷಣದ ಅಧಿಕಾರಿ ಸಿ.ಎಸ್.ವೆಂಕಟೇಶಪ್ಪ, ದಾವಣಗೆರೆಯ ಜಿಲ್ಲಾ ದೈಹಿಕ ಶಿಕ್ಷಣದ ಅಧಿಕಾರಿ ಮಂಜುಳಾ, ರಾಜ್ಯಮಟ್ಟದ ತೀರ್ಪುಗಾರರಾದ ಚನ್ನಪಟ್ಟಣದ ಗೀತಾ, 6 ತಾಲ್ಲೂಕಿನ ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು 11 ಜಿಲ್ಲೆಗಳಿಂದ ಆಗಮಿಸಿದ ಯೋಗ ಪಟುಗಳು, ಚಿತ್ರದುರ್ಗ ಜಿಲ್ಲಾ ಹಾಗೂ ತಾಲ್ಲೂಕು ಎಲ್ಲ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ನಿರ್ದೇಶಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಇಸ್ರೇಲ್ : ಕಾನೂನುಗಳ ಉಲ್ಲಂಘನೆ

**(1ನೇ ಪುಟದಿಂದ)** ನೂರಾರು ಜನರು ಗಡಿ ಉಲ್ಲಂಘಿಸಿ ನಾಗರಿಕರ ಹತ್ಯೆಗೈದಿದ್ದಾರೆ. ಇವರಲ್ಲಿ ಮಕ್ಕಳು ಹಾಗೂ ಹಿರಿಯರೂ ಸೇರಿದ್ದಾರೆ. ಈ ದಾಳಿಯಲ್ಲಿ 1,400 ಜನ ಸಾವನ್ನಪ್ಪಿದ್ದಾರೆ ಹಾಗೂ 199 ಜನರನ್ನು ಅಪಹರಿಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಈ ವಿಷಯದಲ್ಲಿ ಅಪರಾಧ ಮಾಡಿರುವುದು ಸ್ಪಷ್ಟವಾಗಿದೆ. ನಾಗರಿಕರನ್ನು ಅವರ ಮನೆಗಳಲ್ಲೇ ಹತ್ಯೆ ಮಾಡುವುದು, ನಾಗರಿಕರ ಅಪಹರಣ ಮಾಡಿ ಒತ್ತೆಯಾಳಾಗಿಟ್ಟುಕೊಳ್ಳುವುದು ಸ್ಪಷ್ಟವಾಗಿ ಯುದ್ಧಾಪರಾಧ ಎಂದು ಲಂಡನ್‌ನ ಯೂನಿವರ್ಸಿಟಿ ಕಾಲೇಜ್‌ನ ಹೇಮ್ ಅಬ್ರಾಹಂ ಹೇಳಿದ್ದಾರೆ.

**ಇಸ್ರೇಲ್ ಕ್ರಮಗಳೂ ಪ್ರಶ್ನಾರ್ಹ :** ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸೈನ್ಯ ಹಮಾಸ್ ಆಡಳಿತದ ಗಾಜಾ ಮೇಲೆ ವೈಮಾನಿಕ ದಾಳಿ ನಡೆಸಿದೆ. ಆಹಾರ, ನೀರು, ಇಂಧನ ಹಾಗೂ ವಿದ್ಯುತ್ ಪೂರೈಕೆ ನಿಲ್ಲಿಸಿದೆ. ಗಾಜಾದ ಅರ್ಧದಷ್ಟು ಜನ ಸ್ಥಳಾಂತರಗೊಳ್ಳುವಂತೆ ತಿಳಿಸಿದೆ.

ಇಸ್ರೇಲ್ ನಡೆಸಿದ ದಾಳಿಯಲ್ಲಿ 2,800 ಜನ ಸಾವನ್ನಪ್ಪಿದ್ದಾರೆ ಹಾಗೂ 11 ಸಾವಿರ ಜನ ಗಾಯಗೊಂಡಿದ್ದಾರೆ ಎಂದು ಗಾಜಾ ಅಧಿಕಾರಿಗಳು ಹೇಳಿದ್ದಾರೆ. ಗಾಜಾದ 20 ಲಕ್ಷ ಜನರನ್ನು ಇಸ್ರೇಲ್ ಶಿಕ್ಷಿಸುತ್ತಿದೆ ಎಂದು ಟೀಕಿಸಲಾಗುತ್ತಿದೆ. ಜನರಿಗೆ ಆಹಾರ, ನೀರು ಹಾಗೂ ವಿದ್ಯುತ್ ಪೂರೈಕೆ ನಿಲ್ಲಿಸಲಾಗಿದೆ. ಇದರ ಜೊತೆಗೆ ಲಕ್ಷಾಂತರ ಜನರು ಸ್ಥಳಾಂತರಗೊಳ್ಳುವಂತೆ ತಿಳಿಸಲಾಗಿದೆ. ಇದು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳಿಗೆ ಅನುಗುಣವಾಗಿಲ್ಲ ಎಂದು ಜಿನೆವಾದಲ್ಲಿರುವ ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿ ತಿಳಿಸಿದೆ.

ವೈಟ್ ಪಾಸ್ಫರಸ್ ರೀತಿಯ ಸ್ಫೋಟಕವನ್ನು ಜನನಿಬಿಡ ಪ್ರದೇಶಗಳಲ್ಲಿ ಇಸ್ರೇಲ್ ಬಳಸುತ್ತಿದೆ ಎಂದು ಹ್ಯೂಮನ್ ರೈಟ್ಸ್ ವಾಚ್ ಆರೋಪಿಸುತ್ತಿದೆ.ಆದರೆ, ಇಸ್ರೇಲ್ ಆರೋಪ ತಳ್ಳಿ ಹಾಕಿದೆ.

ಈ ಸಂಘರ್ಷಕ್ಕೆ ಸಂಬಂಧಿಸಿದಂತೆ ಎಲ್ಲ ಸಾಕ್ಷಿಗಳನ್ನು ಸಂಗ್ರಹಿಸಲಾಗುತ್ತಿದೆ. ಈ ಬಗ್ಗೆ ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗುವುದು ಎಂದು ವಿಶ್ವ ಸಂಸ್ಥೆಯ ತನಿಖಾ ಆಯೋಗ ಹೇಳಿದೆ. ಆದರೆ, ಅಮೆರಿಕ, ರಷ್ಯಾ ಹಾಗೂ ಇಸ್ರೇಲ್ ಸೇರಿದಂತೆ ಹಲವು ದೇಶಗಳು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಒಪ್ಪುತ್ತಿಲ್ಲ. ಕಾನೂನು ಜಾರಿಗೆ ತರಲು ಐ.ಸಿ.ಸಿ. ಯಾವುದೇ ಪೊಲೀಸ್ ಪಡೆ ಹೊಂದಿಲ್ಲ.

ಇಂಟರ್‌ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್, ಯುರೋಪ್ ಕೋರ್ಟ್ ಆಫ್ ಹ್ಯೂಮನ್ ರೈಟ್ಸ್‌ಗಳೂ ಸಹ ಉಲ್ಲಂಘನೆಗಳ ಬಗ್ಗೆ ವಿಚಾರಣೆ ನಡೆಸುತ್ತಿವೆ. ಇಸ್ರೇಲ್ ಹಾಗೂ ಇತರೆಡೆ ನ್ಯಾಯಾಲಯಗಳಲ್ಲೂ ವಿಚಾರಣೆ ನಡೆಯಬಹುದಾಗಿದೆ.

ಅಂತರರಾಷ್ಟ್ರೀಯ ಕಾಯ್ದೆಗಳ ಉಲ್ಲಂಘನೆಗಳು ಕೆಲವೊಮ್ಮೆ ನಿರ್ಬಂಧಗಳಿಗೂ ಕಾರಣವಾಗ ಬಹುದು. ಉಕ್ರೇನ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ರಷ್ಯಾ ಮೇಲೆ ಅಮೆರಿಕ ಸೇರಿದಂತೆ ಹಲವು ದೇಶಗಳು ನಿರ್ಬಂಧ ಹೇರಿವೆ.


## LIC ಏಜೆಂಟ್ R. S. ಉಮಾಶಂಕರ್ ನಿಧನ



ದಾವಣಗೆರೆ ಸಿಟಿ ನಿವಾಸಿ
ಬಹು ಪರಿಚಿತ LIC ಏಜೆಂಟ್
**ಆರ್.ಎಸ್. ಉಮಾಶಂಕರ್**
ಇವರು ದಿನಾಂಕ 18.10.2023ರ ಬುಧವಾರ ಸಂಜೆ 7-15 ಕ್ಕೆ ಹೃದಯಾಘಾತದಿಂದ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 57 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರಿ ಮತ್ತು ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. **ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಕುವೆಂಪು ನಗರ, ಎಂ.ಸಿ. ಸಿ. 'ಬಿ' ಬ್ಲಾಕ್, 15ನೇ ಮೇನ್, 7ನೇ ಕ್ರಾಸ್‌ನ ಅವರ ಸ್ವಗೃಹ 'ವಿಮಾನಿಧಿ' ಯಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗಿದೆ.**
ನಂತರ ಮೃತರ ಅಂತ್ಯಕ್ರಿಯೆಯನ್ನು ಇಂದು 19.10.2023ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : **ಆರ್.ಎಸ್. ವಿಜಯಾನಂದ್ ಮತ್ತು ಸಹೋದರರು,**
**ಆರ್.ಟಿ. ಸಹೋದರರು ಹಾಗೂ ಕುಟುಂಬದವರು.**
**ಮೊ : 9845222114, 9844187527.**



## ದಿದ್ದಿಗೆ ಮಹಾದೇವಪ್ಪನವರಿಗೆ ಪಿತೃ ವಿಯೋಗ



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ದಿದ್ದಿಗೆ ಗ್ರಾಮದ ದಿದ್ದಿಗೆ ಮಹಾದೇವಪ್ಪನವರ ತಂದೆ
**ಕೆಂಚಾಪುರದ ಬಸವನಗೌಡ** (79)
ಇವರು ದಿನಾಂಕ 18.10.2023ರ ಬುಧವಾರ ಬೆಳಿಗ್ಗೆ 9.55ಕ್ಕೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಅಳಿಯ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.10.2023ರ ಬುಧವಾರ ಜಗಳೂರು ತಾಲ್ಲೂಕಿನ ದಿದ್ದಿಗೆ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.
**ದುಃಖತಪ್ತ ಕುಟುಂಬ ವರ್ಗ**


KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಿವಿಧೆಡೆಗಳಲ್ಲಿ ನವರಾತ್ರಿ ನಾಲ್ಕನೇ ದಿನದ ವಿಶೇಷಾಲಂಕಾರಗಳಲ್ಲಿ ಶಕ್ತಿದೇವತೆಯರು


ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಮಯೂರ ವಾಹನ ಅಲಂಕಾರ


ನಿಟ್ಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದಲ್ಲಿ ದೇವಿಗೆ ಕೂಷ್ಮಾಂಡ ಅಲಂಕಾರ


ಕಾಳಿಕಾದೇವಿ ರಸ್ತೆಯ ಕಾಳಿಕಾದೇವಿ ದೇವಸ್ಥಾನದಲ್ಲಿ ದೇವಿಗೆ ಅರಿಷಿಣ ಅಲಂಕಾರ


ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಮಹಾಗೌರಿ ಅಲಂಕಾರ


ಹಳೆ ಬೇತೂರು ರಸ್ತೆ ಬನಶಂಕರಿ ದೇವಸ್ಥಾನದಲ್ಲಿ ಶ್ರೀ ಕಾಮಾಕ್ಷಿ ದೇವಿ ಅಲಂಕಾರ


ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಸವದತ್ತಿ ಯಲ್ಲಮ್ಮ ಅಲಂಕಾರ


ರಿಂಗ್ ರಸ್ತೆ ಶಾರದಾಂಬ ದೇವಸ್ಥಾನದಲ್ಲಿ ದೇವಿಗೆ ಮಯೂರ ವಾಹನ ಅಲಂಕಾರ


ದೇವಾಂಗಪೇಟೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ವಿಶೇಷಾಲಂಕಾರ


ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಶ್ರೀ ರಾಜರಾಜೇಶ್ವರಿ ಅಲಂಕಾರ


ಕೆಟಿಜೆ ನಗರದ ಶ್ರೀ ತುಳುಜಾ ಭವಾನಿ ದೇವಸ್ಥಾನದಲ್ಲಿ ಅಮ್ಮನವರಿಗೆ ವಿಶೇಷಾಲಂಕಾರ


ಗಾಂಧಿನಗರ ಶ್ರೀ ಹೊರಟ್ಟಿ ದುರ್ಗಾಂಬಿಕಾ, ಮರಿಯಮ್ಮ ದೇವಿಯರಿಗೆ ಕೂಷ್ಮಾಂಡ ಅಲಂಕಾರ


ಚಿಕ್ಕಮಣ್ಣಿ ದೇವರಾಜ ಅರಸು ಬಡಾವಣೆಯಲ್ಲಿ ಸ್ಥಾಪಿಸಿರುವ ದುರ್ಗಾದೇವಿಗೆ ವಿಶೇಷಾಲಂಕಾರ


ಎಸ್‌ಓಜಿ ಕಾಲೋನಿ ಶ್ರೀ ಶನೈಶ್ಚರ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ಚೌಡೇಶ್ವರಿಗೆ ವಿಶೇಷಾಲಂಕಾರ


ಪಿ.ಬಿ ರಸ್ತೆಯ ಪಂಚ ದೇವಸ್ಥಾನಗಳ ಮಹಾ ಕ್ಷೇತ್ರದಲ್ಲಿ ದೇವಿಗೆ ವಿಶೇಷ ಅಲಂಕಾರ


ಜಯದೇವ ಸರ್ಕಲ್‌ನ ಕೂಡಲಿ ಮಠದಲ್ಲಿ ಶ್ರೀದೇವಿಗೆ ದಾಳಿಂಬೆ ಹಣ್ಣಿನ ಅಲಂಕಾರ


ವಿದ್ಯಾನಗರದ ಈಶ್ವರ ಪಾರ್ವತಿ ದೇವಸ್ಥಾನರದಲ್ಲಿ ಶ್ರೀ ಪಾರ್ವತಿ ದೇವಿಗೆ ವಿಶೇಷಾಲಂಕಾರ


ಶಿವಾಜಿ ನಗರ ಶ್ರೀ ನಿಮಿಷಾಂಭ ದೇವಸ್ಥಾನದಲ್ಲಿ ಶ್ರೀ ದೇವಿಗೆ ಕಡ್ಲಿ ಅಲಂಕಾರ


ಬಿ.ಟಿ.ಗಲ್ಲಿ ಮಾರ್ಕೆಟ್ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ


ಡಿಸಿಎಂ ಟೌನ್‌ಶಿಪ್ ಶ್ರೀ ವಾಸವಿ ದೇವಸ್ಥಾನದಲ್ಲಿ ಶ್ರೀ ಅಮ್ಮನವರಿಗೆ ರಜತ ಅಲಂಕಾರ


ಶಾಮನೂರಿನ ಶ್ರೀ ಮಂಗಳಗೌರಮ್ಮ ದೇವಸ್ಥಾನದಲ್ಲಿ ಕೂಷ್ಮಾಂಡ ದೇವಿ ಅಲಂಕಾರ


ಶಾಮನೂರಿನ ಶ್ರೀ ಮಾಲಸಾಂಬ ಗಂಗಮ್ಮ ದೇವಸ್ಥಾನದಲ್ಲಿ ನವರಾತ್ರಿ ವಿಶೇಷಾಲಂಕಾರ


ಭಗತ್‌ಸಿಂಗ್ ನಗರದ ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನ ಕಾಬೂಲ್ ಕಡ್ಲೆ ಅಲಂಕಾರ


ಆಂಜನೇಯ ಬಡಾವಣೆ 19ನೇ ಕ್ರಾಸ್ ಬನ್ನಿ ಮಹಾಂಕಾಳಿದೇವಿಗೆ ವಿಶೇಷಾಲಂಕಾರ


ಉಚ್ಚಂಗಿದುರ್ಗದ ಶ್ರೀ ಉತ್ಸವಾಂಬ ದೇವಿಗೆ ನವರಾತ್ರಿ 3ನೇ ದಿನದ ವಿಶೇಷಾಲಂಕಾರ


ಹರಿಹರ ಮುಖ್ಯರಸ್ತೆಯ ಕಸಬಾ ಊರಮ್ಮ ದೇವಿಗೆ ಉಚ್ಚಂಗೆಮ್ಮ ದೇವಿ ಅಲಂಕಾರ


ಹರಿಹರ ಹೊಸ ಭರಂಪುರದ ಶ್ರೀ ಊರಮ್ಮದೇವಿಗೆ ಸಿಗಂಧೂರು ಚೌಡೇಶ್ವರಿ ಅಲಂಕಾರ


ಹರಿಹರ ಮಹಜೇನಹಳ್ಳಿ ಗ್ರಾಮದೇವತೆ ಊರಮ್ಮ ದೇವಿಗೆ ತುಳುಜಾ ಭವಾನಿ ಅಲಂಕಾರ


ಹರಿಹರ ಹಳ್ಳದಕೇರಿ ಬಡಾವಣೆ ಶ್ರೀ ಏಕನಾಥೇಶ್ವರಿ ದೇವಿಗೆ ಶ್ರೀ ಏಕನಾಥೇಶ್ವರಿ ಅಲಂಕಾರ


ಮಲೇಬೆನ್ನೂರು ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ಭದ್ರಕಾಳಿ ದೇವಿಗೆ ಕೂಷ್ಮಾಂಡ ಅಲಂಕಾರ


ಮಲೇಬೆನ್ನೂರು ಪಟ್ಟಣದ ಗ್ರಾಮದೇವತೆ ಶ್ರೀ ಏಕನಾಥೇಶ್ವರಿಗೆ ವಿಶೇಷ ಅಲಂಕಾರ


ಕೊಕ್ಕನೂರು ಗ್ರಾಮದ ಗ್ರಾಮದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ವಿಶೇಷ ಅಲಂಕಾರ


ಕುಂಬಳೂರಿನ ಗ್ರಾಮದೇವತೆ ಶ್ರೀ ಉಡಸಲಮ್ಮ ದೇವಿಗೆ ನವರಾತ್ರಿಯ ವಿಶೇಷ ಅಲಂಕಾರ


ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ಹಿರೇಮಠದಲ್ಲಿ ಶ್ರೀ ಚೌಡೇಶ್ವರಿ ದೇವಿ ವಿಶೇಷ ಪೂಜೆ

## ಆಹಾರ ಉತ್ಪಾದನೆ ಹೆಚ್ಚಿಸಲು ಸಂಶೋಧನೆಗೆ ಒತ್ತು

ಬೆಂಗಳೂರು, ಅ.18- ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಆಹಾರ ಉತ್ಪಾದನೆ ಹೆಚ್ಚಿಸಲು ಸಂಶೋಧನೆ ಮತ್ತು ಅಧ್ಯಯನಕ್ಕೆ ಸರ್ಕಾರ ಒತ್ತುಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ದೇಶೀ ಸಮ್ಮೇಳನ ಮತ್ತು ಬೇಕಿಂಗ್ ಮೌಲ್ಯ ವರ್ಧನಾ ಸಂಸ್ಥೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಸಿರು ಕ್ರಾಂತಿ ಬಳಿಕ ದೇಶ ಆಹಾರ ಸ್ವಾವಲಂಬನೆಯನ್ನು ಸಾಧಿಸಿತು. ಅದಕ್ಕೂ ಮೊದಲು ಅವಲಂಬನೆ ಇತ್ತು. ಇತ್ತೀಚಿಗೆ ನಿಧನರಾದ ಕೃಷಿ ತಜ್ಞ ಸ್ವಾಮಿನಾಥನ್ ಅವರು ಈ ಹಸಿರು ಕ್ರಾಂತಿಗೆ ಬಹಳಷ್ಟು ಕೊಡುಗೆ ನೀಡಿದ್ದರು ಎಂದರು.

ಆಹಾರ ಉತ್ಪಾದನೆ ಇನ್ನಷ್ಟು ಹೆಚ್ಚಲು, ಗುಣಾತ್ಮಕ ಆಗಲು ಕೃಷಿ ವಿವಿಗಳ ಅಧ್ಯಯನ ಮತ್ತು ಸಂಶೋಧನೆಗಳು ಹೆಚ್ಚಾಗಬೇಕು. ಖುಷ್ಕಿ ಭೂಮಿ ಅತಿ ಹೆಚ್ಚಿರುವ ರಾಜ್ಯ ನಮ್ಮದು. ವಾತಾವರಣ ಬದಲಾವಣೆಯಿಂದ ರಾಜ್ಯ ನಿರಂತರವಾಗಿ ಅತಿವೃಷ್ಟಿ, ಅನಾವೃಷ್ಟಿಗೆ ತುತ್ತಾಗುತ್ತಿದೆ. ಈ ಕಾರಣಕ್ಕೇ ನಮ್ಮ ರೈತರಿಗೆ ಕೃಷಿ, ತಜ್ಞರು ಮತ್ತು ತಂತ್ರಜ್ಞರ ನೆರವು ಅತ್ಯಗತ್ಯ ಎಂದು ಹೇಳಿದರು.

## ಅಮೆರಿಕದ ಪಡೆಗಳ ಮೇಲೆ ಡ್ರೋನ್ ದಾಳಿ

ಬ್ಯೂರತ್, ಅ. 18 – ಪಶ್ಚಿಮ ಇರಾಕ್‌ನಲ್ಲಿರುವ ಅಮೆರಿಕದ ಪಡೆಗಳ ಮೇಲೆ ಎರಡು ಡ್ರೋನ್‌ಗಳ ಮೂಲಕ ದಾಳಿ ನಡೆಸಲಾಗಿದೆ ಎಂದು ಅಮೆರಿಕದ ರಕ್ಷಣಾ ಅಧಿಕಾರಿಗಳು ಹೇಳಿದ್ದಾರೆ.

ಎರಡನೇ ನೆಲೆ ಮೇಲೆ ಮತ್ತೊಂದು ದಾಳಿ ನಡೆಸಿರುವುದಾಗಿ ಇರಾನ್ ಬೆಂಬಲಿತ ಉಗ್ರರು ಹೇಳಿದ್ದಾರೆ. ಎರಡೂ ಘಟನೆಗಳಲ್ಲಿ ಯಾವುದೇ ಹಾನಿಗಳು ಸಂಭವಿಸಿಲ್ಲ. ಆದರೆ, ಇದರಿಂದ ಈ ವಲಯದಲ್ಲಿ ಹೋರಾಟ ತೀವ್ರವಾಗುವ ಕಳವಳವಿದೆ.

# ಲೋಹದ ವಿಷವುಣಿಸಿ 20 ದಿನಗಳಲ್ಲಿ ಕುಟುಂಬದ ಐವರ ಹತ್ಯೆ

## ಕೌಟುಂಬಿಕ ಕಲಹ, ಆಸ್ತಿಗಾಗಿ ಹತ್ಯೆ ಮಾಡಿದ ಇಬ್ಬರು ಮಹಿಳೆಯರ ಬಂಧನ

ಗಡ್ಚಿರೋಲಿ, ಅ. 18 – ಕುಟುಂಬದ ಐವರಿಗೆ ಭಾರೀ ಲೋಹದ ವಿಷವುಣಿಸಿ ಹತ್ಯೆಗೈದು, ಅದನ್ನು ಊಟ ವಿಷವಾಗಿ ಸಂಭವಿಸಿದ ಅವಘಡ ಎಂದು ಬಿಂಬಿಸುವ ಯತ್ನ ನಡೆಸಿದ ಇಬ್ಬರು ಮಹಿಳೆಯರನ್ನು ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ ಬಂಧಿಸಲಾಗಿದೆ.

ಈ ಇಬ್ಬರು ಮಹಿಳೆಯರು ತೆಲಂಗಾಣದಿಂದ ವಿಷ ತರಿಸಿ ಅದನ್ನು ಆಹಾರ ಹಾಗೂ ನೀರಿನಲ್ಲಿ ಬೆರೆಸಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಗಂಡ ಹಾಗೂ ಅತ್ತೆ ಮಾವರ ಮೂದಲಿಕೆ ಕಾರಣದಿಂದ ಒಬ್ಬ ಮಹಿಳೆ ಈ ಕೃತ್ಯ ಎಸಗಿದ್ದಾಳೆ. ಇನ್ನೋರ್ವ ಮಹಿಳೆ ಆಸ್ತಿ ವಿವಾ ದದ ಕಾರಣದಿಂದ ಹತ್ಯೆಯಲ್ಲಿ ಭಾಗಿಯಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಪ್ರಾಶನದಿಂದ ಕುಟುಂಬದ ಇನ್ನಿಬ್ಬರು ಹಾಗೂ ವಾಹನದ ಚಾಲಕ ಅಸ್ವಸ್ಥರಾಗಿದ್ದಾರೆ. ಚಿಕಿತ್ಸೆಯ ನಂತರ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಗಡ್ಚಿರೋಲಿ ಪೊಲೀಸ್ ವರಿಷ್ಠಾಧಿಕಾರಿ ನೀಲೋತ್‌ಪಾಲ್ ಹೇಳಿದ್ದಾರೆ.

ಸೆಪ್ಟೆಂಬರ್ 26ರಿಂದ ಅಕ್ಟೋಬರ್ 15ರ ನಡುವೆ ಈ ಸಾವುಗಳು ಸಂಭವಿಸಿದ್ದವು. ಮೈ ಕೈ ನೋವು, ತೀವ್ರ ಕಾಲು ಸೆಳೆತ, ತಲೆ ನೋವು, ಕಪ್ಪಾದ ತುಟಿಗಳ ಸಮಸ್ಯೆ ಕಾಣಿಸಿಕೊಂಡ ನಂತರ ಸಾವಾಗುತ್ತಿತ್ತು.

ಮಹಾಗಾಂವ್ ಹಳ್ಳಿಯಲ್ಲಿ ಸೆಪ್ಟೆಂಬರ್ 20ರಂದು ಶಂಕರ್ ಕುಂಭಾರೆ ಹಾಗೂ ಪತ್ನಿ ವಿಜಯ ಕುಂಭಾರೆ ಅವರು ಅಸ್ವಸ್ಥರಾಗುವುದರೊಂದಿಗೆ ಈ ಪ್ರಕರಣ ಆರಂಭವಾಗಿತ್ತು. ಸೆಪ್ಟೆಂಬರ್ 26ರಂದು ಶಂಕರ್ ಹಾಗೂ ಮರು ದಿನ ಅವರ ಪತ್ನಿ ಸಾವನ್ನಪ್ಪಿದ್ದರು.

ಕುಂಭಾರೆ ಕುಟುಂಬದವರು ಈ ಸಾವಿನ ಶೋಕದಲ್ಲಿರುವಾಗಲೇ, ಶಂಕರ್ ಮಗ ರೋಶನ್ ಹಾಗೂ ಹೆಣ್ಣು ಮಕ್ಕಳಾದ ಕೋಮಲ್ ದಹಗಾಂವಕರ್ ಮತ್ತು ಆನಂದಾ ಅಸ್ವಸ್ಥರಾಗಿದ್ದರು. ಅವರನ್ನು ಬೇರೆ ಬೇರೆ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಅಕ್ಟೋಬರ್ 8 ಹಾಗೂ ಅಕ್ಟೋಬರ್ 15ರ ನಡುವೆ ಮೂವರು ಮೃತಪಟ್ಟಿದ್ದರು.

ತಂದೆ - ತಾಯಿಗಳ ಅಂತ್ಯಕ್ರಿಯೆಗಾಗಿ ದೆಹಲಿಯಲ್ಲಿದ್ದ ಶಂಕರ್ ಇನ್ನೋರ್ವ ಮಗ ಸಾಗರ್ ಗ್ರಾಮಕ್ಕೆ ಬಂದಿದ್ದರು. ದೆಹಲಿಗೆ ಮರಳಿದ ನಂತರ ಅವರೂ ಅಸ್ವಸ್ಥರಾದರು. ಚಿಕಿತ್ಸೆಯ ನಂತರ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ.

ಸಾಗರ್ ಅವರನ್ನು ಗ್ರಾಮಕ್ಕೆ ಕರೆ ತಂದಿದ್ದ ಅವರ ವಾಹನ ಚಾಲಕ ಸಹ ಅಸ್ವಸ್ಥರಾಗಿದ್ದರು. ಅವರನ್ನೂ ಸಹ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ನಡುವೆ, ಸಂಬಂಧಿಯೊಬ್ಬರಲ್ಲೂ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದವು.

ಇದೆಲ್ಲವೂ ವಿಷಪ್ರಾಶನದ ಲಕ್ಷಣಗಳು ಎಂದು ವೈದ್ಯರು ಶಂಕಿಸಿದ್ದರು. ಆದರೆ, ಪ್ರಾಥಮಿಕ ಪರೀಕ್ಷೆಯಲ್ಲಿ ವಿಷಪ್ರಾಶನದ ಯಾವುದೇ ಮಾಹಿತಿ ಸಿಗಲಿಲ್ಲ.

ನಿಗೂಢ ಸಾವುಗಳ ತನಿಖೆಗಾಗಿ ಪೊಲೀಸರು ಐವರು ಸದಸ್ಯರ ತನಿಖಾ ತಂಡ ರಚಿಸಿದ್ದರು. ವಿಚಾರಣೆ ಮುಂದುವರೆಸಿದಾಗ ಪೊಲೀಸರಿಗೆ ರೋಶನ್ ಪತ್ನಿ ಸಂಘಮಿತ್ರ ಹಾಗೂ ಶಂಕರ್ ಸಂಬಂಧಿ ರೋಸಾ ರಾಮ್ಟೆಕೆ ಮೇಲೆ ಅನುಮಾನ ಬಂದಿತು.

ಸಂಘಮಿತ್ರ ಕುಟುಂಬದ ಸದಸ್ಯರ ವಿರೋಧದೊಂದಿಗೆ ರೋಶನ್ ಮದುವೆಯಾಗಿದ್ದರೆ, ರೋಸಾ ಈ ಕುಟುಂಬದ ಜೊತೆ ಆಸ್ತಿ ವಿವಾದ ಹೊಂದಿದ್ದು ಅನುಮಾನಕ್ಕೆ ಕಾರಣವಾಗಿತ್ತು. ವಿಚಾರಣೆ ವೇಳೆ ಇವರ ಸಂಚು ಬಯಲಾಗಿದೆ.

## ಹರಿಹರದ ವಾಲ್ಮೀಕಿ ಸಮಾಜಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಹರಿಹರ, ಅ, 18 - ನಗರದ ವಾಲ್ಮೀಕಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಹಳ್ಳದಕೇರಿ ನಾಯಕ ಸಮಾಜದ ಕಚೇರಿಯಲ್ಲಿ ನಡೆಸಲಾಯಿತು ಎಂದು ನಾಯಕ ಸಮಾಜದ ನಿಕಟಪೂರ್ವ ಅಧ್ಯಕ್ಷ ಕೆ.ಬಿ. ಮಂಜುನಾಥ್ ತಿಳಿಸಿದರು.

ಗೌರವ ಸಲಹೆಗಾರರಾಗಿ ಗುತ್ತಿಗೆದಾರ ಕೆ. ಬಿ. ಮಂಜುನಾಥ್, ನಗರಸಭೆ ಸದಸ್ಯ ಆರ್. ದಿನೇಶ್ ಬಾಬು, ದೇವೇಂದ್ರಪ್ಪ, ಪಾಲಾಕ್ಷಪ್ಪ, ಎಂ. ಮಹಾಂತೇಶ್, ಗೌರವಾಧ್ಯಕ್ಷ ಅರ್. ರಾಜು, ಅಧ್ಯಕ್ಷ ಎಮ್. ಹೆಚ್. ಬಸವರಾಜ್ ಮೆಣಸಿನಾಳ, ಗೌರವ ಉಪಧ್ಯಕ್ಷ ಹಂಚಿನಮನೆ ರೇವಣಪ್ಪ, ಉಪಾಧ್ಯಕ್ಷ ಗಂಗಾಧರ್ ಮೆಣಸಿನಾಳ, ಕಾರ್ಯದರ್ಶಿ ಆರ್. ಧನ ರಾಜ್, ಸಹ ಕಾರ್ಯದರ್ಶಿ ರಾಜು ಭಾವಿಕಟ್ಟೆ ಖಜಾಂಚಿಯಾಗಿ ಭರತ್ ಮುದೇನೂರು, ಸದಸ್ಯರುಗಳು ಅಣ್ಣಪ್ಪಬೆಣ್ಣೆ, ಭೀಮಣ್ಣ ದೋಗ್ಗಳ್ಳಿ. ನಿಂಗೇಶ್. ರಾಜಶೇಖರ ಎನ್, ಕುಮಾರ್ ಕುಂದುವಾಡ. ರೆಕ್ಕೆ ನಾಗರಾಜ. ಸೋಮಣ್ಣ ಗಂಗಾನಗರ. ಜಿ.ಸಿ.ಬಿ ಪರಶುರಾಮ್, ಮೋಹನ್ ಕುಮಾರ್ (ಕಾಳಿದಾಸ ನಗರ) ಅಂಜಿನಪ್ಪಗುಂಡಗತ್ತಿ (ಜಿ.ಸಿ ಬಡಾವಣೆ) ರವಿಕುಮಾರ್, ಎಂ. ರಮೇಶ, ಪರಶುರಾಮ್ (ಹಳೆ ಕಚೇರಿ) ಪ್ರಶಾಂತ್ (ಕೊಳಚೆ ಪ್ರದೇಶ) ರವಿರಾಜ್ ತಾವರಗಿ, ಹರೀಶ (ದುರ್ಗ ಪೇಂಟ್) ಮಾರುತಿ (ಮಟ್ಟಿ ಬೀರಪ್ಪ ಕಣ್ಣ) ರಾಜು ಬಾವಿಕಟ್ಟೆ, ವಿಶ್ವನಾಥ, (ಕೇಶವ ನಗರ) ಮಾರುತಿ ಗುಡ್ ಸೆಡ್. ವಾಗೇಶ್, (ಹಳ್ಳದ ಕೇರಿ)ಪರಶುರಾಮ (ಬ್ಯಾಂಕ್) ಗಳನ್ನು ಸರ್ವ ಸದಸ್ಯರು ಸೇರಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜದ ಮಹಿಳಾ ಮುಖಂಡರಾದ ಪಾರ್ವತಿ ಇತರರು ಹಾಜರಿದ್ದರು.

## ನಾಯಿಗೆ ನೂರಿ ಎಂದು ಹೆಸರಿಟ್ಟ ರಾಹುಲ್ ಗಾಂಧಿ ವಿರುದ್ಧ ದೂರು

ಪ್ರಯಾಗ್‌ರಾಜ್, ಅ. 18 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನೂರಿ ಎಂಬ ಹೆಸರಿನ ನಾಯಿಯೊಂದನ್ನು ತಮ್ಮ ತಾಯಿಗೆ ಕೊಡುಗೆಯಾಗಿ ನೀಡಿರುವುದರ ವಿರುದ್ಧ ಎ.ಐ.ಎಂ.ಎ.ಐ. ಮುಖಂಡರೊಬ್ಬರು ಸ್ಥಳೀಯ ನ್ಯಾಯಾಲಯ ದಲ್ಲಿ ಅರ್ಜಿ ದಾಖಲಿಸಿದ್ದಾರೆ. ಮೊಹಮ್ಮದ್ ಫರ್ಹಾನ್ ಎಂಬುವವರು ಅರ್ಜಿ ದಾಖಲಿಸಿದ್ದು, ನೂರಿ ಎಂಬ ಹೆಸರು ಇಸ್ಲಾಂಗೆ ಸಂಬಂಧಿಸಿದ್ದಾಗಿದೆ. ನಾಯಿಗೆ ಈ ಹೆಸರಿಟ್ಟಿರುವುದು ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂದಿದ್ದಾರೆ.

ರಾಹುಲ್ ಗಾಂಧಿ ಅವರ ಫೇಸ್‌ಬುಕ್ ಪುಟ ಹಾಗೂ ಯೂಟ್ಯೂಬ್ ಚಾನಲ್ ಸೇರಿದಂತೆ ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಗಳು ಪ್ರಕಟವಾಗಿವೆ. ನಂತರ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿರುವುದಾಗಿ ಫರ್ಹಾನ್ ಹೇಳಿದ್ದಾರೆ.

## ಸಚಿವ ಶಿವಾನಂದ ಪಾಟೀಲ್ ರಾಜೀನಾಮೆಗೆ ಬಿಜೆಪಿ ಒತ್ತಾಯ

ನವದೆಹಲಿ, ಅ. 18 - ತೆಲಂಗಾಣದಲ್ಲಿ ಮದುವೆಯೊಂದರಲ್ಲಿ ಸಚಿವ ಶಿವಾನಂದ ಪಾಟೀಲ್ ಅವರಿಗೆ ನೋಟುಗಳ ಮಳೆಗರೆದಿದ್ದನ್ನು ಟೀಕಿಸಿರುವ ಬಿಜೆಪಿ, ಸಚಿವರ ರಾಜೀನಾಮೆಗೆ ಒತ್ತಾಯಿಸಿದೆ. ಈ ವಿಷಯ ಪ್ರಸ್ತಾಪಿಸಿದ ಬಿಜೆಪಿ ವಕ್ತಾರ ಗೌರವ ಭಾಟಿಯಾ, ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಹಣ ಬಳಸಿಕೊಂಡು ಪ್ರಜಾಪ್ರಭುತ್ವ ಮತ್ತು ಚುನಾವಣೆಗಳನ್ನು ಅಪವಿತ್ರಗೊಳಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಚಿವ ಪಾಟೀಲ್, ನಾನು ಹೈದರಾಬಾದ್‌ಗೆ ಮದುವೆಗೆ ಹೋಗಿದ್ದೆ. ಅವರ ಸಂಸ್ಕೃತಿಯಂತೆ ಅವರು ನಡೆದುಕೊಂಡಿದ್ದಾರೆ. ಇದಕ್ಕೂ ತಮಗೂ ಸಂಬಂಧ ಇಲ್ಲ ಎಂದಿದ್ದಾರೆ.

## ನವದುರ್ಗೆಯರ ಐದನೇ ರೂಪ ಸ್ಕಂದಮಾತೆಗೆ ನಮನ

ಮಾತೆ ಮಾತೆ ಸ್ಕಂದಮಾತೆ ನಿನಗೆ ವಂದನೆ
ಮಾತೆ ರಕ್ಷಿಸಮ್ಮ ಎಂದು ನಮ್ಮ ಪ್ರಾರ್ಥನೆ

ಜಗನ್ಮಾತೆ ನೀನೆ ನಮ್ಮೆಲ್ಲರ ಕಾಯುವಳೆ
ಜಗದೀಶ್ವರಿ ಜಗದ್ರಕ್ಷಕಿ ಜಗಜ್ಜನನಿಯೆ



ಮೂರು ಕಣ್ಣಿನಿಂದ
ಜಗವ ಕಾಯುತಿರುವಳೆ
ಪಾರು ಮಾಡಿ
ಸಂಸಾರದಿಂದ
ಸುಖ ಕೊಡುವಳೆ
ಯಾರು ಸುಮಾರು
ನಿನಗೆ ಹೇಳು ಅಲೌಕಿಕಳೆ
ಮೂರಾರು ರೂಪದಿಂದ
ಪೂಜೆಗೊಳುವಳೆ

ಮಾತೃತ್ವದ ಶಕ್ತಿಯಿಂದ ತುಂಬಿರುವವಳೆ
ಮಾತೃಸ್ವರೂಪಿಣಿ ಮಾತೃತ್ವ ಕೊಡುವಳೆ
ಉತ್ತಮ ಸಂತಾನದಿಂದ ಶ್ರೇಯಸ್ಸು ಮಾಡುತ
ಉತ್ತಮವಾಗಿ ವಂಶವ ಬೆಳೆಸುವವಳೆ

ಆರು ತಲೆಯ ಷಣ್ಮುಖನ ಹಿಡಿದಿರುವವಳೆ
ಎರಡು ಕೈಯಲಿ ಕಮಲದ ಹೂವಿರುವಳೆ
ಪರಮ ಅಭಯ ಹಸ್ತದಿಂದ ಆಶೀರ್ವದಿಸುವಳೆ
ಸಿರಿಹರಿಯ ತಂಗಿಯೆ ಮಹಾದುರ್ಗೆಯೆ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಹರಿಹರ : ಊರಮ್ಮ ದೇವಿಯ ದೇವಸ್ಥಾನಕ್ಕೆ ಕುಡಿಯುವ ನೀರಿನ ಟ್ಯಾಂಕರ್ ಕೊಡುಗೆ



ಹರಿಹರ, ಅ. 18- ನಗರದ ಮಾಜೇನಹಳ್ಳಿ ಗ್ರಾಮದೇವತೆ ಊರಮ್ಮ ದೇವಿಯ ದೇವಸ್ಥಾನದ ಭಕ್ತರಿಗೆ ಕುಡಿಯುವ ನೀರಿನ ಟ್ಯಾಂಕರ್ ಅನ್ನು 37 ಸಾವಿರ ರೂಪಾಯಿ ವೆಚ್ಚದಲ್ಲಿ ಬಾಲಕೃಷ್ಣ ಮಹಿಷ್ಕರ್ (ಟಿಕಾರೆ) ರವರು ದಾನವನ್ನು ಮಾಡಿದ್ದು, ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಹಲಸಬಾಳು ಹೆಚ್.ಎಂ. ಶಿವಾನಂದಪ್ಪ ಮತ್ತು ಕೋಶಾಧಿಕಾರಿ ಗೌಡ್ರು ಚನ್ನಬಸಪ್ಪ ಚಾಲನೆ ನೀಡಿದರು.

ಈ ವೇಳೆ ಕುಡಿಯುವ ನೀರಿನ ಟ್ಯಾಂಕರ್ ದಾನವಾಗಿ ನೀಡಿದ ಬಾಲಕೃಷ್ಣ ಮಹಿಷ್ಕರ್ ಅವರನ್ನು ದೇವಸ್ಥಾನ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಬಿ.ಪಿ. ಹರೀಶ್, ಉಪಾಧ್ಯಕ್ಷ ಸುಭಾಷ್ ಬೊಂಗಾಳೆ, ಪ್ರಧಾನ ಕಾರ್ಯದರ್ಶಿ ಸಿ.ಎನ್. ಹುಲುಗೇಶ್, ಸಹ ಕಾರ್ಯದರ್ಶಿ ಅಶೋಕ್ ಆರ್. ಭೂತೆ, ಧರ್ಮದರ್ಶಿಗಳಾದ ಡಿ.ಹೇಮಂತರಾಜ್, ಜಿ.ಬಿ. ಚಂದ್ರಶೇಖರಪ್ಪ, ಡಿ.ಯಮುನಪ್ಪ, ಕೆ ಶಿವಪ್ರಕಾಶ್ ಶಾಸ್ತ್ರಿ, ಹಂಚಿನ ನಾಗಪ್ಪ, ಡಿ. ನಟರಾಜ್, ಆರ್.ಎಸ್. ಕಾರ್ತಿಕ್, ನಿಂಗಪ್ಪ ಪೂಜಾರ್, ಅರ್ಚಕರಾದ ಜನಾರ್ದನಚಾರ್, ನಾಗರಾಜಚಾರ್, ಬಣಕಾರ ಜಿ. ಎಲ್. ಆಂಜನೇಯ, ರಾಮಪ್ಪ, ದೇವೇಂದ್ರಪ್ಪ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಲಿಂಗೇಶ್, ಮತ್ತಿತರರು ಹಾಜರಿದ್ದರು.

## ರೇಣುಕಾಚಾರ್ಯ ಅವಶ್ಯಕತೆ ನನಗಾಗಲೀ, ಪಕ್ಷಕ್ಕಾಗಲೀ ಇಲ್ಲ



ಹೊನ್ನಾಳಿ, ಅ.18- ಎಂ.ಪಿ.ರೇಣುಕಾಚಾರ್ಯ ಅವರ ಅವಶ್ಯಕತೆ ಕಾಂಗ್ರೆಸ್ ಪಕ್ಷಕ್ಕೆ ಇಲ್ಲವೆಂದು ಶಾಸಕ ಡಿ.ಜಿ.ಶಾಂತನಗೌಡ ಸ್ಪಷ್ಟಪಡಿಸಿದರು.

ಗೊಲ್ಲರಹಳ್ಳಿಯ ಅವರ ನಿವಾಸದಲ್ಲಿ ಪತ್ರಿಗೋಷ್ಠಿಯನ್ನುದ್ದೇ ಶಿಸಿ ಅವರು ಮಾತನಾಡಿದರು.

ಮಾಜಿ ಶಾಸಕರ ಕಾಂಗ್ರೆಸ್ ಸೇರ್ಪಡೆಯ ವಿಚಾರಗಳನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ಇದರ ಬಗ್ಗೆ ಅವರು ನನ್ನೊಂದಿಗೆ ಚರ್ಚೆ ಮಾಡಿಲ್ಲ, ಮಾಡಿದರೂ ಯಾವುದೇ ಪ್ರಯೋಜನವಿಲ್ಲ ಎಂದು ತಿಳಿಸಿದರು.

ನಮ್ಮ ಕಾರ್ಯಕರ್ತರು ನಮ್ಮ ಪಕ್ಷಕ್ಕೆ ಅವರ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದಾರೆ, ನಮ್ಮ ಕಾರ್ಯಕರ್ತರ ಅಭಿಪ್ರಾಯವೇ ನನ್ನ ಅಭಿಪ್ರಾಯವೂ ಆಗಿದೆ ಎಂದು ಹೇಳಿದರು.

ನಾನು ಮಾಜಿ ಶಾಸಕರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದೇನೆ, ನಾವಿಬ್ಬರೂ ಅನ್ಯೋನ್ಯವಾಗಿದ್ದೇವೆ, ನಮ್ಮಿಬ್ಬರ ಸಂಬಂಧ ಚೆನ್ನಾಗಿದೆ ಎನ್ನುವ ಮಾತುಗಳು ನಮ್ಮ ಕಾರ್ಯಕರ್ತರಿಂದ ಹಿಡಿದು ಕ್ಷೇತ್ರದ ಜನರ ಬಾಯಲ್ಲಿಯೂ ಕೇಳಿ ಬರುತ್ತಿದೆ. ಇದು ಸುಳ್ಳು, ನಾನು ಮಾಜಿ ಶಾಸಕರೊಂದಿಗೆ ಯಾವುದೇ ಹೊಂದಾಣಿಕೆ ಮಾಡಿಕೊಂಡಿಲ್ಲ. ಅದರ ಅವಶ್ಯಕತೆಯೂ ನನಗಾಗಲೀ ಪಕ್ಷಕ್ಕಾಗಲೀ ಇಲ್ಲವೆಂದು ಪುನರುಚ್ಚರಿಸಿದರು.

ಚುನಾವಣಾ ಪೂರ್ವದಲ್ಲಿ ಅವರು ನಮ್ಮ ಬಗ್ಗೆ ಸಾಕಷ್ಟು ಅಪಪ್ರಚಾರ ಮಾಡಿದ್ದಾರೆ, ಅದಕ್ಕೆ ನಾವೂ ಪ್ರತ್ಯಾರೋಪ ಮಾಡಿದ್ದೇವೆ, ಇದೆಲ್ಲ ಕ್ಷೇತ್ರದ ಜನತೆಗೆ ಗೊತ್ತಿದೆ. ಹೀಗಾಗಿ ಅವರೊಂದಿಗೆ ನಮ್ಮ ಹೊಂದಾಣಿಕೆಯಾಗುವ ಪ್ರಶ್ನೆಯೇ ಬರುವುದಿಲ್ಲ ಎಂದು ಹೇಳಿದರು.

ಚುನಾವಣಾ ಪೂರ್ವದಲ್ಲಿ ನೀವು ಅಧಿಕಾರಕ್ಕೆ ಬಂದಾಗ ಎಂ.ಪಿ. ರೇಣುಕಾಚಾರ್ಯ ಅವರ ಹಗರಣಗಳನ್ನು ತನಿಖೆ ಮಾಡಿಸುತ್ತೇನೆ ಎಂದು ಹೇಳಿಕೆ ನೀಡಿದ್ದಿರಿ, ಅಧಿಕಾರಕ್ಕೆ ಬಂದು ಅದಾಗಲೇ ಐದು ತಿಂಗಳು ಕಳೆದಿವೆ, ಮತ್ತೇ ಏಕೆ ಸುಮ್ಮನಿದ್ದೀರಿ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಶಾಸಕರು, ನಾನು ಶಾಸಕನಾದ ತಕ್ಷಣವೇ ನಮ್ಮ ಸರ್ಕಾರಕ್ಕೆ ಅವರ ಹಗರಣಗಳ ಕುರಿತು ತನಿಖೆ ಮಾಡುವಂತೆ ಮನವಿ ಮಾಡಿದ್ದೇನೆ. ಗಂಗಾ ಕಲ್ಯಾಣ ಯೋಜನೆಯಡಿ ಕೊರೆಸಿರುವ ಕೊಳವೆಬಾವಿ ವಿಚಾರದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ನಮ್ಮ ಸರ್ಕಾರ ಅದರ ಬಗ್ಗೆ ತನಿಖೆ ಕೈಗೊಂಡಿದ್ದು, ಅದು ಜಿ.ಪಂ. ಕಚೇರಿಗೆ ವಿಚಾರಣೆಗಾಗಿ ಬಂದಿದೆ ಎಂದು ಹೇಳಿದರು.

## ಹೆದ್ದಾರಿ ದುರಸ್ತಿ ಬಗ್ಗೆ ಅಸಮಾಧಾನ



**ಕುಂಬಳೂರು**

ಮಲೇಬೆನ್ನೂರು, ಅ.18- ಪಟ್ಟಣದಲ್ಲಿ ಹಾಯ್ದು ಹೋಗಿರುವ ಎಸ್.ಹೆಚ್. ಹೆದ್ದಾರಿಯಲ್ಲಿ ಬಿದ್ದಿರುವ ಗುಂಡಿಗಳನ್ನು ಡಾಂಬರೀಕರಣ ಮಾಡುವ ಕಾಮಗಾರಿ ಲೋಕೋಪಯೋಗಿ ಇಲಾಖೆಯಿಂದ ನಡೆದಿದ್ದು, ದುರಸ್ಥಿ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಮಾಡದೇ ಅರ್ಧಬರ್ಧ ಕೆಲಸ ಮಾಡುತ್ತಿದ್ದಾರೆ. ಬುಧವಾರ ಕುಂಬಳೂರು ಬಳಿ ಹೆದ್ದಾರಿಯಲ್ಲಿ ಒಂದು ಗುಂಡಿಗೆ ಡಾಂಬರ್ ಹಾಕಿದರೆ, ಇನ್ನೊಂದು ಗುಂಡಿಯನ್ನು ಹಾಗೆಯೇ ಬಿಟ್ಟು ಹೋಗಿದ್ದಾರೆ ಎಂದು ಕುಂಬಳೂರು ಗ್ರಾಮಸ್ಥರು ದೂರಿದ್ದಾರೆ.

## ವಿವಿಧ ಪದವಿಗಳಿಗೆ ಮುಕ್ತ ವಿಶ್ವವಿದ್ಯಾನಿಲಯ ಅರ್ಜಿ ಆಹ್ವಾನ

ದಾವಣಗೆರೆ, ಅ.18- ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ (ಜುಲೈ ಆವೃತ್ತಿ) ಪ್ರಥಮ ವರ್ಷದ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಿ.ಎ, ಬಿ.ಕಾಂ., ಬಿ.ಎಸ್.ಸಿ., ಬಿ.ಲಿಬ್., ಐ.ಎಸ್.ಸಿ., ಬಿ.ಸಿ.ಎ., ಬಿ.ಬಿ.ಎ., ಬಿ.ಎಸ್.ಡಬ್ಲ್ಯೂ., ಎಂ.ಎ., ಎಂ.ಕಾಂ., ಎಂ.ಎ-ಎಂ.ಸಿ.ಜೆ., ಎಂ.ಲಿಬ್.ಐ.ಎಸ್.ಸಿ., ಎಂ.ಬಿ.ಎ., ಎಂಎಸ್.ಸಿ., ಎಂ.ಸಿ.ಎ., ಎಂ.ಎಸ್. ಡಬ್ಲ್ಯೂ. ಪದವಿಗಳು ಹಾಗೂ ಸ್ನಾತಕೋತ್ತರ ಪದವಿ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಬಿಪಿಎಲ್ ಕಾರ್ಡ್ ಹೊಂದಿದ ಮಹಿಳಾ ವಿದ್ಯಾರ್ಥಿನಿಯರಿಗೆ, ಡಿಫೆನ್ಸ್ ಹಾಗೂ ಮಾಜಿ ಸೈನಿಕರು, ಆಟೋ ಮತ್ತು ಕ್ಯಾಬ್ ಚಾಲಕರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ಮತ್ತು ಕೋವಿಡ್-19 ಸಮಯದಲ್ಲಿ ಪೋಷಕರನ್ನು ಕಳೆದುಕೊಂಡ ಮಕ್ಕಳು, ದೃಷ್ಟಿಹೀನ ಮಕ್ಕಳು ಮತ್ತು ತೃತೀಯ ಲಿಂಗಿಗಳಿಗೆ ಪೂರ್ಣ ಶುಲ್ಕ ರಿಯಾಯಿತಿ ಇರುತ್ತದೆ. ಅಲ್ಲದೇ ಎರಡು ಕೋರ್ಸುಗಳನ್ನು ಏಕಕಾಲದಲ್ಲಿ ಒಂದು ಭೌತಿಕ ಕ್ರಮ ಮತ್ತೊಂದು ದೂರಶಿಕ್ಷಣ ಕ್ರಮದಲ್ಲಿ ಓದಲು ಅವಕಾಶವಿದೆ.

ಆಸಕ್ತ ಅಭ್ಯರ್ಥಿಗಳು ನಾಡಿದ್ದು ದಿನಾಂಕ 20 ರೊಳಗಾಗಿ ಕರಾಮುವಿಯ ಅಧಿಕೃತ ವೆಬ್‌ಸೈಟ್: www.ksoumysuru.ac.in ನಲ್ಲಿ ಆನ್‌ಲೈನ್ ಅಡ್ಮಿಷನ್ ಪೋರ್ಟಲ್‌ಗೆ ಭೇಟಿ ನೀಡುವ ಮೂಲಕ ಅರ್ಜಿಯನ್ನು ಭರ್ತಿ ಮಾಡಿ, ದಾವಣಗೆರೆ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ, ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿ ದ್ಯಾನಿಲಯದ ಅಧಿಕೃತ ಜಾಲತಾಣ www.ksoumysuru.ac.in ಅಥವಾ ಸ. ಸಂ. 8690544544, 8800335638, ಮೊ. ಸಂ. 9916009318, 8095939359 ಹಾಗೂ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿರುವ ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರ, ಕಚೇರಿ ಸಂಪರ್ಕಿಸಲು ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
1) 30x40, 30x40 West ಅಕ್ಕ-ಪಕ್ಕ 40 ಅಡಿ ರೋಡಿಗಿದೆ, ಬನಶಂಕರಿ ಲೇಔಟ್‌ನಲ್ಲಿ. 2)40x57 East ಶಿವ-ಪಾರ್ವತಿ ಲೇಔಟ್‌ನಲ್ಲಿ 3) 40x40 South 70x62 Corner ಡಾಲರ್ಸ್ ಕಾಲೋನಿಯಲ್ಲಿ. ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆಗೆ ಇವೆ**
ಶ್ರೀನಿವಾಸ ನಗರ 10ನೇ ಕ್ರಾಸ್, 2ನೇ ಮಹಡಿಯಲ್ಲಿ 1BHK, 10x30, 10x30 ಎರಡು ಸೀಟಿನ ಮನೆ ಮಾರಾಟಕ್ಕಿವೆ. ದೇವರಾಜ ಸೊಸೈಟಿ ಹತ್ತಿರ, ಲೆನಿನ್ ನಗರ, ದಾವಣಗೆರೆ.
98800 68009

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಿಕೊಡಲಾಗುವುದು.
99863 61250, 80730 24690

**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಅನುಭವವಿರುವ ಮಹಿಳೆಯರು / ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸುವ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5ರವರೆಗೆ.
08192 254736

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಸೈಟುಗಳು ಮಾರಾಟಕ್ಕಿವೆ**
1) 40x50 South ವಿನಾಯಕ ಬಡಾವಣೆಯಲ್ಲಿ 2) 30x43 North ಅಥಣಿ ಕಾಲೇಜ್ ಹತ್ತಿರ 3) 55x40 South LIC ಕಾಲೋನಿಯಲ್ಲಿ. ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಎರಡನೇ ಹಂತದಲ್ಲಿ 30 × 50 (ಉತ್ತರ) ಹಾಗೂ ಹಳೆ ಕುಂದುವಾಡದಲ್ಲಿ (ದಕ್ಷಿಣ) 28.93×30=868 ಚ.ಅ. ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99723 43286

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
S.S. ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**9th, 10th Maths, PUC Tution ಮಾಡಲಾಗುತ್ತದೆ.**
1 ರಿಂದ 7ನೇ ತರಗತಿಯವರೆಗೆ ಕನ್ನಡ ಟ್ಯೂಷನ್ ಮಾಡಲಾಗುತ್ತದೆ. ಚಿಕ್ಕಮಕ್ಕಳಿಗೆ ಮತ್ತು ಮಹಿಳೆಯರಿಗೆ ದೇವರ ನಾಮ, ಲಲಿತ ಸಹಸ್ರನಾಮ ಹೇಳಿಕೊಡಲಾಗುತ್ತದೆ.
97387 65628, 90351 06163

**ಬೇಕಾಗಿದ್ದಾರೆ**
ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ :
94836 19966

**IMMEDIATELY WANTED LADY TEACHERS**
BA., BEd., - 2, BSc., BEd., - 2 Attractive Salary will be given right & experienced candidates only
95356 10817

**ಸೈಟ್ ಬೇಕಾಗಿದೆ**
ದಾವಣಗೆರೆ ಪಿಬಿ ರಸ್ತೆ ಕರೂರ್ ಇಂಡಸ್ಟ್ರಿಯಲ್ ಏರಿಯಾ ಹಾಗೂ ಸುತ್ತಮುತ್ತಲಿನಲ್ಲಿ 3000 ದಿಂದ 5000ಚ.ಅ. ಇಂಡಸ್ಟ್ರಿಯಲ್ ಸೈಟ್ ಖರೀದಿಗೆ ಬೇಕಾಗಿದೆ.
98444 87585

**ಬೇಕಾಗಿದ್ದಾರೆ**
S.V. MARKETING DAVANGERE
P.B. Road, (Harihara Road) ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
94480 46571, 78993 37571

**SN ENTERPRISES**
ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ
Girls work: Office Work and Telecalling (Unmarried) Basic Salary : 9000/-, Boys work : Office work and Field Work. Basic Salary 13,000/- Girls : 85480 47353 Boys :97400 29866

**ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ವುಮೆನ್ಸ್ ಪ್ಯಾರಡೈಸ್ ಇನ್ನರ್‌ವೇರ್ ಸ್ಟೋರ್
ಎವಿಕೆ ಕಾಲೇಜ್ ರಸ್ತೆ, ದಾವಣಗೆರೆ.
96204 53208

**FOR RENT**
2 BHK Home 2nd Floor with Attached bath room, 2 BHK Home, 1st floor Single Room with Toilet & Kitchen, Behind Swamy Vivekanda School, Banashankari Badavane, DVG.
99027 00345

**ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಮಳಿಗೆ ಬಾಡಿಗೆಗಿದೆ**
ಹದಡಿ ರಸ್ತೆಯಲ್ಲಿ ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಎದುರು 15X60 ಮಳಿಗೆ ಬಾಡಿಗೆಗೆ ಇದೆ.
94484 15523
94802 26251

**ತಕ್ಷಣ ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆ, 7ನೇ ತರಗತಿ ಪಾಸಾದವರು ಸಹಾಯಕರು ಹುಡುಗರು, ಮಹಿಳೆ ತಕ್ಷಣ ಬೇಕಾಗಿದ್ದಾರೆ.
88614 38237

**ಸೈಂಟ್ ಜೋಸೆಫ್ ಟೈಮ್ಸ್**
ಚರ್ಚ್ ರೋಡ್ ಪಿಜೆ ಬಡಾವಣೆ, ರಾಮ್ & ಕೋ ಸರ್ಕಲ್, ದಾವಣಗೆರೆ.
ನಮ್ಮೆಲ್ಲಾ ಗ್ರಾಹಕರಿಗೆ ದಸರಾ, ದೀಪಾವಳಿ ಹಬ್ಬದ ಶುಭಾಶಯಗಳು
ನಿಮ್ಮ ಹಳೆಯ ಗೋಡೆ ಗಡಿಯಾರಗಳನ್ನು ತೆಗೆದುಕೊಂಡು ಪ್ರಸಿದ್ಧ ಕಂಪನಿಗಳ ಗೋಡೆ ಗಡಿಯಾರಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗುತ್ತದೆ.
Old Clock Exchange Offer FLAT 30% OFF
98440 11958, 9108178012
* T & C APPLY

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
98442-94446

**TUTION**
IGCSE, ICSE, CBSE and State Board from Class 1 to 12, MCC `A' Block
98444 92888


**ಮಳಿಗೆ ಬಾಡಿಗೆಗಿದೆ**
ನರಸರಾಜ ರಸ್ತೆ ಹಾಸಭಾವಿ ಸರ್ಕಲ್ ಹತ್ತಿರವಿರುವ ಆಲದಹಳ್ಳಿ ಕಾಂಪ್ಲೆಕ್ಸ್‌ನಲ್ಲಿ 13x16 1/2 ಅಳತೆಯ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿರಿ.
94801 75911

**ಸೈಟ್ ಮಾರಾಟಕ್ಕೆ**
ನಿಟ್ಟುವಳ್ಳಿ ವಿಭಾಗ ಸರಸ್ವತಿ ಬಡಾವಣೆ ಶ್ರೀ ದುರ್ಗಾಂಬಿಕಾ ಹೈಸ್ಕೂಲ್ ರಸ್ತೆಯಲ್ಲಿ 35x45 ಅಳತೆಯ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ.
93532 88317

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಹಾಗೂ ಇಡ್ಲಿ, ವಡ, ಬಜ್ಜಿ ಭಟ್ಟರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 7 ರಿಂದ ಸಂಜೆ 5:30 ರವರೆಗೆ. ಸಂಪರ್ಕಿಸಿ :
63666 35593

**ಜಮೀನು ಬೇಕಾಗಿದೆ**
ದಾವಣಗೆರೆಯ ಸುತ್ತ-ಮುತ್ತ 20 ರಿಂದ 30 ಕಿ.ಮೀ. ಒಳಗೆ ಜಮೀನು ಬೇಕಾಗಿದೆ ಹಾಗೂ ಜಮೀನಿನ ಮೇಲೆ ಯಾವುದೇ ತಂಟೆ, ತಕರಾರು, ಕೇಸ್, ವೈಯಕ್ತಿಕ ಸಮಸ್ಯೆ ಇರಬಾರದು. ಎಲ್ಲಾ ದಾಖಲೆಗಳನ್ನು ಹೊಂದಿರಬೇಕು. ಮಾರಲು ಇಚ್ಛೆ ಇರುವವರು ಕರೆ ಮಾಡಿ.
99806 67339

**ಸಪ್ಲೈಯರ್ಸ್ ಬೇಕಾಗಿದ್ದಾರೆ**
ದಾವಣಗೆರೆ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕಾರ್ಯ ನಿರ್ವಹಿಸಲು ನುರಿತ ಸಪ್ಲೈಯರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
80889 56656

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಕ್ಷಿಣ ಭಾರತದ 8 ದಿನಗಳ ಸುಖಕರ ಪ್ರವಾಸ, ಶಿವಕಂಚಿ, ವಿಷ್ಣುಕಂಚಿ, ಮಹಾಬಲಿಪುರ, ಪಾಂಡಿಚೇರಿ ಕುಂಭಕೋಣಂ, ಚಿದಂಬರಂ, ತಂಜಾವೂರು, ಶ್ರೀರಂಗಂ, ರಾಮೇಶ್ವರ, ಕನ್ಯಾಕುಮಾರಿ, ಮಧುರೈ, ತ್ರಿಪುರಾಕೋದ್ರಂ, ಪಳನಿ, ಮೈಸೂರು ತಿರುಚಂದೂರು ದಿನಾಂಕ : 26.10.2023ರ ಗುರುವಾರ ರಾತ್ರಿ 10 ಗಂಟೆಗೆ ಬಕ್ಕೇಶ್ವರ ಶಾಲೆ ಹತ್ತಿರ, ಸ್ವಾಮಿ ಅಯ್ಯಪ್ಪ ದೇವಸ್ಥಾನದಿಂದ ಹೊರಡುವುದು.
94485 33928, 99800 32271

**WANTED**
Banking Sector Tele Caller (Female Only) Qualification : Any Degree.
90715 55081
Interview Time - 11AM

**ಕಾರು ಬೇಕಾಗಿದೆ**
ಮಾರುತಿ 800 ಕಾರು ಖರೀದಿಗೆ ಬೇಕಾಗಿದೆ, 2nd Hand Car. ಸಂಪರ್ಕಿಸಿ :
70196 18397

**WANTED**
Office staff female =4 nos (smart looking and good communication skill and compute knowledge, language knowns kannada, hindi, English, marathi )good salary +incentive more details contact :
80505 10329 WhatsApp
7259782546
send the photo's and BIODATA

**Retired Persons Required**
SBI Life Insurance SSLC ಪಾಸಾದವರು Part time ಕೆಲಸ ಮಾಡಿ ತಿಂಗಳಿಗೆ 30,000/- ಸಂಪಾದಿಸಬಹುದು.
99009 19091

**WANTED TEACHERS**
B.sc / M.sc With Good English Communication Skill (Only Ladies)
Tatva Pre School Davanagere. Contact :
99641 10746

**ಶ್ರೀ ವಿಘ್ನೇಶ್ವರ ಹೋಮ್ ನರ್ಸಿಂಗ್ ಸರ್ವೀಸ್**
ಹೋಮ್ ಕೇರ್ ಸರ್ವೀಸ್ ಹೋಮ್ ಬೇಬಿ ಕೇರ್ ಸರ್ವೀಸ್, ಬೆಂಗಳೂರು, ಮಂಗಳೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಹುಬ್ಬಳ್ಳಿ. ವಯೋವೃದ್ಧರನ್ನು ನೋಡಿಕೊಳ್ಳಲು 24x7 ಕೆಲಸಕ್ಕೆ ಸಿಗುತ್ತಾರೆ. ನಮ್ಮಲ್ಲಿ ಓಲ್ಡೇಜ್ ರೂಂ ಲಭ್ಯವಿದೆ. ಸಂಪರ್ಕಿಸಿ.
91644 93271, 77951 51086

**REQUIRED**
Fresh graduates (B.E, MCA, BCA) required for an IT company. 3 months training will be given. Send resumes to:
shajmathews@gmail.com

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ Rs. 2000/- per sq ft. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**4BHK ಮನೆ ಬಾಡಿಗೆಗೆ ಇದೆ**
(ಕಮರ್ಷಿಯಲ್ ಪರ್ಪೋಸ್) ಎಂ.ಸಿ.ಸಿ. 'ಎ' ಬ್ಲಾಕ್‌ನ ಮುಖ್ಯ ಸತ್ಸಂಗ ರಸ್ತೆಯಲ್ಲಿ (ತೋಗಟವೀರ ಕಲ್ಯಾಣ ಮಂಟಪ ರೋಡ್) ನವೀಕರಿಸಲಾದ ಮನೆ ವಾಣಿಜ್ಯ ಉದ್ದೇಶಕ್ಕಾಗಿ (Office, Agency, Pharmacy, Poly Clinic, Co-Operative Society) ಬಾಡಿಗೆಗೆ ಇದೆ. ಸಂಪರ್ಕಿಸಿ. :
98868 17252

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**PART TIME JOBS (ಸುವರ್ಣಾವಕಾಶ)**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
87490 98879

# ಅತೃಪ್ತರ ಟೀಮ್ ನಾಯಕ ನಾನಲ್ಲ



**ಪಕ್ಷ ಕಟ್ಟಿ ಬೆಳೆಸಿದವನನ್ನು ಮೂಲೆ ಗುಂಪು ಮಾಡುವ ಕೆಲಸ ಮಾಡಲಾಗುತ್ತಿದೆ. ಈಗ ನಾನು ಟಿಕೆಟ್ ಆಕಾಂಕ್ಷಿ ಎಂದಿದ್ದಕ್ಕೆ ನನ್ನನ್ನು ಟಾರ್ಗೆಟ್ ಮಾಡಲಾಗಿದೆ. ಆದರೆ, ನನ್ನನ್ನು ಮುಗಿಸಲು ಸಾಧ್ಯವಿಲ್ಲ.**

**-ಎಂ.ಪಿ. ರೇಣುಕಾಚಾರ್ಯ, ಮಾಜಿ ಸಚಿವ**

ದಾವಣಗೆರೆ, ಅ. 18- ಜಿಲ್ಲೆಯಲ್ಲಿ ಹಿರಿಯರನ್ನು ಕಡೆಗಣಿಸಿದ್ದು ನೋವಾಗಿದೆ. ಹಾಗಂತ ನಾನು ಯಾವುದೇ ಅತೃಪ್ತರ ಟೀಮ್‌ನ ನಾಯಕನಲ್ಲ. ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಹೋಗುವುದಿಲ್ಲ. ಲೋಕಸಭೆ ಚುನಾವಣೆಗೆ ಬಿಜೆಪಿಯಿಂದ ಪ್ರಬಲ ಆಕಾಂಕ್ಷಿ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಹಾಲಿ ಸಂಸದರು, ಇರುವವರು ಇರಬಹುದು ಹೋಗುವವರು ಹೋಗ ಬಹುದು ಎಂದು ಹೇಳಿದ್ದಾರೆ ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿಯಿಂದ ಟಿಕೆಟ್ ಯಾರಿಗೆ ಎಂದು ಘೋಷಣೆ ಮಾಡಿಲ್ಲ. ಅವರ ಬಗ್ಗೆ ನನಗೆ ಗೌರವವಿದೆ. ಅವರು ವಯಸ್ಸಿನಲ್ಲಿ ಹಿರಿಯರು, ಅವರು ಬಿಜೆಪಿಗೆ ಬರುವುದಕ್ಕಿಂತ ಮುಂಚೆಯಿಂದಲೇ ನಾನು ಬಿಜೆಪಿಯಲ್ಲಿದ್ದೆ ಎಂದರು.

ಮಾಡಾಳ್ ವಿರುಪಾಕ್ಷಪ್ಪ ಹಾಗೂ ಪುತ್ರ ಮಲ್ಲಿಕಾರ್ಜುನ್ ಅವರನ್ನು ಟಾರ್ಗೆಟ್ ಮಾಡಿ ಉಚ್ಚಾಟನೆ ಮಾಡಿಸಿದರು. ಗುರುಸಿದ್ದನಗೌಡ್ರು ದಾವಣಗೆರೆ ಜಿಲ್ಲಾಧ್ಯಕ್ಷರಾಗಿ ಪಕ್ಷ ಕಟ್ಟಿದರು. ಅವರನ್ನು ಅವರ ಮಕ್ಕಳನ್ನು ಟಾರ್ಗೆಟ್ ಮಾಡಿ ಮುಗಿಸಿದರು, ಮಾಡಾಳ್ ವಿರುಪಾಕ್ಷಪ್ಪ, ಗುರುಸಿದ್ದನಗೌಡ್ರು ಅವರ ಮನೆಗೆ ಭೇಟಿ ನೀಡಿದರೆ ಅದನ್ನು ತಪ್ಪು ಎಂದು ಹೇಳುತ್ತಾರೆ. ಪಕ್ಷ ಕಟ್ಟಿ ಬೆಳೆಸಿದವನನ್ನು ಮೂಲೆ ಗುಂಪು ಮಾಡುವ ಕೆಲಸ ಮಾಡುತ್ತಿದ್ದಾರೆಂದ ರೇಣುಕಾಚಾರ್ಯ, ಈಗ ನಾನು ಟಿಕೆಟ್ ಆಕಾಂಕ್ಷಿ ಎಂದಿದ್ದಕ್ಕೆ ನನ್ನನ್ನು ಟಾರ್ಗೆಟ್ ಮಾಡಿದ್ದಾರೆ. ಆದರೆ, ನನ್ನನ್ನು ಮುಗಿಸಲು ಸಾಧ್ಯವಿಲ್ಲ ಎಂದರು.

ಯಡಿಯೂರಪ್ಪ ಪಕ್ಷ ಕಟ್ಟಿ ಬೆಳೆಸಿದರು. ಅವರನ್ನು ಕಡೆಗಣಿಸುತ್ತಿರುವುದು ಸೇರಿದಂತೆ ಬಿಜೆಪಿಯ ನಾಯಕತ್ವದ ದೌರ್ಬಲ್ಯ ಸೇರಿ ಸಾಕಷ್ಟು ವಿಷಯಗಳನ್ನು ನಾನು ಮಾತನಾಡಿದ್ದೇನೆ.

ಬಿಜೆಪಿ ಮುಳುಗುತ್ತಿರುವ ಹಡಗು ಎಂದು ನಾನು ಹೇಳಿಲ್ಲ. ಆದರೆ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಆ ರೀತಿ ವರದಿಯಾಗಿದೆ. ಇದರಿಂದ ಕಾರ್ಯಕರ್ತರಿಗೆ, ಮುಖಂಡರಿಗೆ ನೋವಾಗಿದ್ದರೆ ನಾನು ಅವರ ಬಳಿ ಕ್ಷಮೆ ಯಾಚಿಸುತ್ತೇನೆ ಎಂದರು.

ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುತ್ತೆಂದು ಎಲ್ಲೂ ಹೇಳಿಲ್ಲ.ಇದೆಲ್ಲಾ ಊಹಾಪೋಹ ಅಷ್ಟೇ ಎಂದ ರೇಣುಕಾಚಾರ್ಯ, ನಾನು ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳನ್ನು ಬರಗಾಲದ ಪಟ್ಟಿಗೆ ಸೇರಿಸುವಂತೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿದ್ದೆ. ಅದೇ ರೀತಿ ಸಚಿವರಾದ ಬೋಸರಾಜು, ಸತೀಶ್ ಜಾರಕಿಹೊಳಿ, ಮಧು ಬಂಗಾರಪ್ಪನವರನ್ನು ನನ್ನ ಅವಧಿಯಲ್ಲಿ ಮಂಜೂರಾದ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವಂತೆ ಭೇಟಿ ಮಾಡಿದ್ದೇನೆಯೇ ವಿನಃ ಕಾಂಗ್ರೆಸ್ ಸೇರಲು ಅಲ್ಲ ಎಂದರು.

ಚುನಾವಣೆಯಲ್ಲಿ ಸೋತ ಬಳಿಕ ನಾನು ಮನೆಯಲ್ಲಿ ಕೂತಿಲ್ಲ. ಬದಲಾಗಿ ಅವಳಿ ತಾಲ್ಲೂಕಿನಾದ್ಯಂತ ಪ್ರವಾಸ ಮಾಡಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 9 ನೇ ವರ್ಷದ ಸಾಧನೆಯ ಕರಪತ್ರವನ್ನು ಮನೆ - ಮನೆಗೂ ವಿತರಿಸಿದ್ದೇನೆ ಎಂದರು. ಜನಾದೇಶ ಅವರ ಪರವಾಗಿ ಬಂದಿದ್ದು, ಹೊನ್ನಾಳಿ -ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಅವರು ಒಳ್ಳೆಯ ಕೆಲಸ ಮಾಡಲಿ. ಅವರ ಒಳ್ಳೆಯ ಕೆಲಸಕ್ಕೆ ನನ್ನ ಸಹಕಾರ ಇದೆ ಎಂದರು.

# ಗಾಜಾ ಮೇಲೆ ದಿಗ್ಬಂಧನ : ಎಸ್‌ಯುಸಿಐ ಪ್ರತಿಭಟನೆ




ದಾವಣಗೆರೆ, ಅ. 18- ಗಾಜಾ ಮೇಲೆ ಜಿಯೋನಿಸ್ಟ್ ಇಸ್ರೇಲ್ ದಿಗ್ಬಂಧನ ಮತ್ತು ಪ್ಯಾಲೆಸ್ತೇನ್ ಮೇಲಿನ ಯುದ್ಧಾಪರಾಧಗಳನ್ನು ಖಂಡಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಿತು.

ಪಕ್ಷದ ರಾಜ್ಯ ಸಮಿತಿ ಹಿರಿಯ ಸೆಕ್ರೆಟ್ರಿಯೇಟ್ ಸದಸ್ಯ ಸುನೀತ್ ಕುಮಾರ್ ಮಾತನಾಡಿ, ಯುದ್ಧ ನೆಪ ಮಾತ್ರವಾಗಿದ್ದರೂ ಅದರ ಹಿಂದಿರುವ ಕಾರಣ, ಮಾರುಕಟ್ಟೆಯ ಲಾಭ, ಪ್ಯಾಲೆಸ್ತೇನ್‌ನಲ್ಲಿರುವ ಯಥೇಚ್ಛವಾದ ನೈಸರ್ಗಿಕ ತೈಲ ಮತ್ತು ನೈಸರ್ಗಿಕ ಅನಿಲ ಸಂಪತ್ತು. ಸಾಮ್ರಾಜ್ಯ ಶಾಹಿಗಳು ಇದನ್ನು ಕಬಳಿಸಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಪ್ಯಾಲೆಸ್ತೇನಿಗಳು ಇದರ ವಿರುದ್ಧ ಧೀರೋದಾತ್ತವಾಗಿ, ನಿರಂತರವಾಗಿ ಹೋರಾಟಗಳ ಮೂಲಕ ಇಮ್ಮೆಟ್ಟಿಸುತ್ತಿದ್ದಾರೆಂದು ತಿಳಿಸಿದರು.

ಭಾರತ ಇಸ್ರೇಲ್‌ಗೆ ಬೆಂಬಲವಾಗಿ ನಿಂತಿರುವುದು, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹಾಗೂ ಸ್ವಾತಂತ್ರ್ಯಕ್ಕಾಗಿ ಜೀವ ತೆತ್ತ ಸಾವಿರಾರು ಹೋರಾಟಗಾರರಿಗೆ ಮಾಡಿರುವ ದ್ರೋಹ. ಈ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ಹಿಂಪಡೆದು, ತಮ್ಮ ನಿಲುವನ್ನು ಬದಲಾಯಿಸಿ, ಪ್ಯಾಲೆಸ್ತೇನಿ ಜನತೆಯ ಪರವಾಗಿ ನಿಲ್ಲಬೇಕೆಂದು ಮನವಿ ಮಾಡಿದರು.

ರಾಜ್ಯ ಸಮಿತಿ ಸದಸ್ಯರಾದ ಬಿ.ಆರ್. ಅಪರ್ಣ ಮಾತನಾಡಿ, ಈಗಾಗಲೇ ತನ್ನಿಂದ ಮುತ್ತಿಗೆಗೆ ಒಳಗಾಗಿರುವ ಗಾಜಾ ಪ್ರದೇಶದ ಮೇಲೆ ಸಂಪೂರ್ಣ ದಿಗ್ಬಂಧನ ಹಾಕುವ ಜಿಯೋನಿಸ್ಟ್ ಇಸ್ರೇಲ್ ಸರ್ಕಾರದ ಘೋಷಣೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕೈದಾಳೆ ಮಾತನಾಡಿ, ಪ್ಯಾಲೆಸ್ತೇನ್ ಮೇಲಿನ ದಾಳಿಯನ್ನು ಈ ಕೂಡಲೇ ಇಸ್ರೇಲ್ ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಟಿ. ಅಸ್ಗರ್ ಅಲಿ, ಮೊಹಮ್ಮದ್ ಅಲಿ, ಟಿ.ವಿ.ಎಸ್ ರಾಜು, ಮಂಜುನಾಥ್ ಕುಕ್ಕುವಾಡ, ಮಧು, ತಿಪ್ಪೇಸ್ವಾಮಿ, ಪರಶುರಾಮ್, ಭಾರತಿ, ಪೂಜಾ, ಮಂಜುನಾಥ ರೆಡ್ಡಿ, ರಾಜು, ಗುರು, ಹರಿಪ್ರಸಾದ್, ಮಹಾಂತೇಶ್, ಕಾವ್ಯ, ಕೌಶಿಕ್, ಶಶಿ, ಚಿರು, ಅನಿಲ್, ಮಮತಾ, ಸುಮನ್, ಸರಸ್ವತಿ, ಬಸವರಾಜು, ರವಿ ಮತ್ತಿತರರಿದ್ದರು.

## ಸ್ಟೇಟ್ ಪಾರ್ಕ್ ಜಿಮ್‌ನಲ್ಲಿನ ದಾಂಡೀಯಾ ನೃತ್ಯದಲ್ಲಿ ಎಸ್ಸೆಸ್



ದಾವಣಗೆರೆ, ಅ. 18 - ನಗರದ ಸ್ಟೇಟ್ ಪಾರ್ಕ್ ಜಿಮ್‌ನಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಜಿಮ್ ಸದಸ್ಯರುಗಳಿಗೆ ದಾಂಡೀಯಾ ನೃತ್ಯವನ್ನು ಏರ್ಪಡಿಸಲಾಗಿತ್ತು. ಶಾಸಕ ಶಾಮನೂರು ಶಿವಶಂಕರಪ್ಪ ಅವರು ನೃತ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಸದಸ್ಯರುಗಳ ಜೊತೆ ದಾಂಡೀಯಾದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಜಿಮ್ ಮಾಲೀಕ ರೂಪಿತ್ ನಾಗರಾಜ್, ಮಾಜಿ ಮೇಯರ್ ಶ್ರೀಮತಿ ರೇಖಾ ನಾಗರಾಜ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಮಂಜುನಾಥ ಗಡಿಗುಡಾಳ್, ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ನಿಖಿಲ್ ಶೆಟ್ಟಿ, ರಾಜು ಭಂಡಾರಿ, ಶ್ರೀಕಾಂತ್ ಬಗೇರ, ಯುವರಾಜ್, ಕಾರ್ತಿಕ್, ಮಯೂರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಾಯಿಬಾಬಾರ ಬೆಳ್ಳಿ ಮೂರ್ತಿಗೆ ಕ್ಷೀರಾಭಿಷೇಕ



ಎಂಸಿಸಿ ಎ ಬ್ಲಾಕ್, 8ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ಶ್ರೀ ಸದ್ಗುರು ಸಾಯಿಬಾಬಾರವರ 105ನೇ ಪುಣ್ಯಾರಾಧನೆ ಮಹೋತ್ಸವವು ಇದೇ ದಿನಾಂಕ 25ರವರೆಗೆ ನಡೆಯಲಿದ್ದು, ಇಂದು ಬಾಬಾರವರ ಬೆಳ್ಳಿ ಮೂರ್ತಿಗೆ ಸರ್ವ ಭಕ್ತಾದಿಗಳಿಂದ ಕ್ಷೀರಾಭಿಷೇಕ ಏರ್ಪಡಿಸಲಾಗಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ರೈತರ ಹೋರಾಟಕ್ಕೆ ಮಣಿಯದ ರಾಜ್ಯ ಸರ್ಕಾರ: ಖಂಡನೆ

ದಾವಣಗೆರೆ, ಅ. 18- ಭದ್ರಾ ನಾಲೆಗೆ ನಿರಂತರವಾಗಿ ನೀರು ಹರಿಸುವಂತೆ ಆಗ್ರಹಿಸಿ ನಡೆಸಿದ ಪ್ರತಿಭಟನೆ, ಈ ಸಂಬಂಧ ಹಲವರಿಗೆ ಮಾಡಿಕೊಂಡ ಮನವಿಗೆ ಸ್ಪಂದಿಸದೇ ನೀರು ನಿಲುಗಡೆ ಮಾಡಿರುವುದು ಖಂಡನೀಯ ಎಂದು ರೈತ ಒಕ್ಕೂಟದ ಮುಖಂಡ ಬಿ.ಎಂ. ಸತೀಶ್ ಕೊಳೇನಹಳ್ಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭದ್ರಾ ನಾಲೆಗೆ ಸತತ ನೂರು ದಿನಗಳ ಕಾಲ ನೀರು ಹರಿಸಬೇಕೆಂದು ಜಲಸಂಪನ್ಮೂಲ ಸಚಿವರೂ, ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಐಸಿಸಿ ಅಧ್ಯಕ್ಷರೂ, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರಲ್ಲಿ ಮನವಿ ಮಾಡಿದಾಗ ದಾವಣಗೆರೆ ಜಿಲ್ಲೆಯ ರೈತರ ಹಿತಾಸಕ್ತಿಗೆ ಅನುಗುಣವಾಗಿ ನೀರು ಹರಿಸುವ ಭರವಸೆ ನೀಡಿದ್ದರು. ಆದರೆ ನಾಲೆಗೆ ಅ. 16 ರಿಂದಲೇ ನೀರು ನಿಲ್ಲಿಸಿರುವುದರಿಂದ 1.40 ಲಕ್ಷ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯುವ ರೈತರಿಗೆ ಅನಾನುಕೂಲವಾಗಿದೆ ಎಂದರು.

ಈ ಕೂಡಲೇ ಆನ್ ಅಂಡ್ ಆಫ್ ಪದ್ಧತಿ ನಿಲ್ಲಿಸಿ, ನಿರಂತರವಾಗಿ ನೀರು ಹರಿಸಬೇಕೆಂದು ಒತ್ತಾಯಿಸಿದರು. ಜಿಲ್ಲೆಯ ಉಸ್ತುವಾರಿ ಸಚಿವರೂ ಸೇರಿದಂತೆ ಜನಪ್ರತಿನಿಧಿಗಳು ರೈತರ ಹಿತಾಸಕ್ತಿ ಕಾಪಾಡುವಲ್ಲಿ ತೀವ್ರ ವಿಫಲರಾಗಿದ್ದಾರೆ. ಐಸಿಸಿ ತೀರ್ಮಾನದಂತೆ ನಾಲೆಯಲ್ಲಿ ನೀರು ಹರಿಸುವ ಭರವಸೆ ಕೂಡ ಈಡೇರಿಲ್ಲ ಎಂದು ತಿಳಿಸಿದರು.

ರೈತರ ಒಕ್ಕೂಟ, ಭಾರತೀಯ ರೈತ ಒಕ್ಕೂಟದ ಪದಾಧಿಕಾರಿಗಳಾದ ಹೆಚ್.ಆರ್. ಲಿಂಗರಾಜ್ ಶಾಮನೂರು, ಬಿ.ನಾಗೇಶ್ವರರಾವ್ ಬೆಳವನೂರು, ಕಲ್ಲುಬಂಡೆ ಪ್ರಸಾದ್, ಪುಟರಾಜ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವೀಣಾವಾದನ, ಶಾಸ್ತ್ರೀಯ ಸಂಗೀತ

ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ಮೈದಾನದಲ್ಲಿರುವ ಸಾರ್ವಜನಿಕ ವಿಜಯದಶಮಿ ಮಹೋತ್ಸವದಲ್ಲಿ ಹಮ್ಮಿಕೊಂಡಿರುವ ದಸರಾ ಕಾರ್ಯಕ್ರಮದಲ್ಲಿ ಇಂದು ಸಂಜೆ 4.30 ಕ್ಕೆ ರಾಷ್ಟ್ರ ಸೇವಿಕಾ ಸಮಿತಿ ವತಿಯಿಂದ ಲಲಿತಾ ಸಹಸ್ರನಾಮ ಹಾಗೂ ದೇವಿ ಭಜನಾ ಪಠಣ, ಮಹಿಳಾ ತಂಡಗಳಿಂದ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗಾನಸೌರಭ ಸಂಗೀತ ವಿದ್ಯಾಲಯದ ವಿದುಷಿ ಶ್ರೀಮತಿ ಶುಭದಾ ಇವರ ಶಿಷ್ಯರಿಂದ ವೀಣಾ ವಾದನ ಮತ್ತು ಸಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯುವುದು.

## ಮಲೇಬೆನ್ನೂರು : ಸಾಮೂಹಿಕ ಲಲಿತ ಸಹಸ್ರ ನಾಮವಳಿ ಪಠಣ



ಮಲೇಬೆನ್ನೂರು, ಅ.18- ಪಟ್ಟಣದ ಹೊರವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಮಹಿಳೆಯರು ಸಾಮೂಹಿಕ ಲಲಿತ ಸಹಸ್ರ ನಾಮಾವಳಿಯನ್ನು ಪಠಣ ಮಾಡಿದರು. ಮಲೇಬೆನ್ನೂರಿನ ವಾಸವಿ ಮಹಿಳಾ ಮಂಡಳಿ, ಕಾಳಿ ಕಾಂಬ ಸ್ತ್ರೀ ಶಕ್ತಿ ಸಂಘ, ಗೆಳೆತಿಯರ ಬಳಗ, ಶ್ರೀನಿಧಿ ಮಹಿಳಾ ಸಂಘ, ಶ್ರೀ ವೀರಭದ್ರೇಶ್ವರ ಟ್ರಸ್ಟ್ ಮಹಿಳಾ ಮಂಡಳಿ ಮತ್ತು ಕೊಮಾರನ ಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥ ಮಹಿಳಾ ಭಜನಾ ಮಂಡಳಿ, ಕೊಕ್ಕನೂರು ಹಾಗೂ ಹಾಲಿವಾಣ ಗ್ರಾಮಗಳ ವಾಸವಿ ಮಹಿಳಾ ಸಂಘ ಮತ್ತು ಹರಿಹರದ ವಾಸವಿ ಪ್ರಣತಿ ಮಂಡಳಿಯ ಸದಸ್ಯರು ಸೇರಿದಂತೆ ಕೊಮಾರನಹಳ್ಳಿ, ಕುಂಬಳೂರು, ಜಿಗಳಿಯ ಮಹಿಳೆಯರೂ ಈ ಲಲಿತ ಸಹಸ್ರ ನಾಮವಳಿ ಪಠಣದಲ್ಲಿ ಪಾಲ್ಗೊಂಡಿದ್ದರು.

## ಇಂದು ವಿಕಲಚೇತನರಿಗೆ ವ್ಹೀಲ್‌ಚೇರ್, ವಾಕರ್, ಶ್ರವಣ ಸಾಧನ ವಿತರಣೆ



ಕಕ್ಕರಗೊಳ್ಳದ ವಿನಯ್‌ಕುಮಾರ್ ಜಿ.ಬಿ. ಅಭಿಮಾನಿ ಬಳಗದ ಆಶ್ರಯದಲ್ಲಿ ವಿಕಲಚೇತನರಿಗೆ ವ್ಹೀಲ್‌ಚೇರ್, ವಾಕರ್ ಮತ್ತು ಶ್ರವಣ ಸಾಧನ ವಿತರಣಾ ಸಮಾರಂಭವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಎಸ್.ಎಸ್. ಬಡಾವಣೆಯ 'ಎ' ಬ್ಲಾಕ್‌ನಲ್ಲಿರುವ ಜನಸಂಪರ್ಕ ಕಚೇರಿ, ಸಂ.2415/45, 10ನೇ ಅಡ್ಡ ರಸ್ತೆ, ಅಥಣಿ ಕಾಲೇಜು ರಸ್ತೆಯ ಕೊನೆಯ ಭಾಗದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಸದ್ಗುರು ಪರಮಹಂಸ ವಿದ್ಯಾವರೇಣ್ಯ ಮುರುಳೀಧರ ಸ್ವಾಮಿಗಳು ಹಾಗೂ ಯರಗುಂಟೆಯ ಶ್ರೀ ಪರಮೇಶ್ವರ ಮಹಾಸ್ವಾಮಿಗಳು ವಹಿಸಲಿದ್ದು, ಇನ್‌ಸೈಟ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ವಿನಯ್‌ಕುಮಾರ್ ಜಿ.ಬಿ. ಕಕ್ಕರಗೊಳ್ಳ ಉಪಸ್ಥಿತರಿರುವರು.

## ಶಾಮನೂರಿನಲ್ಲಿ ಇಂದು ಶ್ರೀ ದೇವಿಯ ಪುರಾಣ ಪ್ರವಚನ

ದಾವಣಗೆರೆ - ಶಾಮನೂರಿನ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನದಲ್ಲಿ ಇಂದು ಶ್ರೀ ದೇವಿಯ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಇಂದು ಸಂಜೆ ದೀಪಾರಾಧನೆ ನಡೆಯುವುದು. ರಾತ್ರಿ 8.30 ಗಂಟೆಗೆ ಶಾಮನೂರು ಕೆ.ಎಸ್. ಮಂಜುನಾಥ ಆಚಾರ್ ಮತ್ತು ಸಂಗಡಿಗರಿಂದ ಭಕ್ತಿಗೀತೆ, ಭಾವಗೀತೆ ಕಾರ್ಯಕ್ರಮ ನಡೆಯಲಿದೆ.

## ಶಂಕರ ಮಠದಲ್ಲಿ ಇಂದು ಚಂಡಿಕಾ ಹೋಮ

ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯುತ್ತಿರುವ ಶರನ್ನವರಾತ್ರ್ಯುತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8.30 ಕ್ಕೆ ಸ್ಕಂದ ಮಾತಾ ಆರಾಧನೆ, 10 ಗಂಟೆಗೆ ಚಂಡಿಕಾ ಹೋಮ, ಸುಮಂಗಲಿ, ಕನ್ನಿಕಾ ಪೂಜೆ, ಮಧ್ಯಾಹ್ನ 12.30 ಕ್ಕೆ ಮಹಾಪೂರ್ಣಾಹುತಿ, ಪ್ರಸಾದ ವಿನಿಯೋಗ.

ಸಂಜೆ 6 ಗಂಟೆಗೆ ದುರ್ಗಾದೀಪ ನಮಸ್ಕಾರ ಅಷ್ಟಾವಧಾನ ಸೇವೆ, ಸಪ್ತಶತಿ ಪಾರಾಯಣ, ದೀಪಾರಾಧನೆ, ರಾತ್ರಿ 8.30 ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ.

## ವಿಜನ್ ಇಂಟರ್ ನ್ಯಾಷನಲ್ ಸ್ಕೂಲ್ ಮಾನ್ಯತೆ ಹಿಂಪಡೆದ ಶಿಕ್ಷಣ ಇಲಾಖೆ

ದಾವಣಗೆರೆ, ಅ. 18 - ಎಂಪವರ್ ಎಜುಕೇಷನ್ ಆಶ್ರಯದಲ್ಲಿನ ವಿಜನ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಮಾನ್ಯತೆಯನ್ನು ಹಿಂಪಡೆಯಲಾಗಿದೆ ಎಂದು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಈ ಶಾಲೆಯು ಇಲಾಖೆಯಿಂದ ಅನುಮತಿ ಪಡೆದ ಸ್ಥಳದಲ್ಲಿ ನಡೆಸದೇ ಅನಧಿಕೃತವಾಗಿ ಬೇರೆ ಸ್ಥಳದಲ್ಲಿ ನಡೆಸುತ್ತಿರುವ ಹಾಗೂ ಈ ಶಾಲೆಯ ಕಟ್ಟಡದ ಮೇಲೆ ವಿದ್ಯುತ್ ಹೈಟೆನ್ಷನ್ ತಂತಿ ಹಾದು ಹೋಗಿದ್ದು, ಹಾಗೂ ಮಹಾನಗರ ಪಾಲಿಕೆಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆಯದೇ ಕಟ್ಟಡ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ಈ ಶಾಲೆಯ ಮಾನ್ಯತೆಯನ್ನು ಹಿಂಪಡೆಯಲಾಗಿದೆ. ವಿದ್ಯಾರ್ಥಿಗಳ ಪೋಷಕರು ಈ ಶಾಲೆಗೆ ದಾಖಲಾತಿ ಮಾಡದಂತೆ ಹಾಗೂ ಈಗಾಗಲೇ ದಾಖಲಾತಿ ಹೊಂದಿರುವ ಮಕ್ಕಳನ್ನು ಸಂಬಂಧಿಸಿದ ಪೋಷಕರು ಸಮೀಪದ ಅಧಿಕೃತ ಶಾಲೆಗೆ ದಾಖಲಾತಿ ಮಾಡುವಂತೆ ಅವರು ಪೋಷಕರಿಗೆ ಕರೆ ನೀಡಿದ್ದಾರೆ.

## ಸಾಲ ತೀರುವಳಿ ಮಾಡುವಂತೆ ಕಿರುಕುಳ: ರೈತ ಸಂಘದ ಆರೋಪ

ದಾವಣಗೆರೆ, ಅ. 18- ಟ್ರ್ಯಾಕ್ಟರ್ ಖರೀದಿಗಾಗಿ ಖಾಸಗಿ ಬ್ಯಾಂಕಿನಿಂದ ಸಾಲ ಪಡೆದು, ಮರು ಪಾವತಿ ಮಾಡುತ್ತಾ ಬಂದಿದ್ದರೂ ಸಹ ಕಂತು ಪಾವತಿಗೆ ಒತ್ತಡ ಹಾಕುವ ಮೂಲಕ ಸಾಲಗಾರ ರೈತನಿಗೆ ಬ್ಯಾಂಕ್ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಬುಳ್ಳಾಪುರದ ಹನುಮಂತಪ್ಪ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಚನ್ನಗಿರಿ ತಾಲ್ಲೂಕು ಮಂಗೇನಹಳ್ಳಿ ಗ್ರಾಮದ ಕೆ.ಬಿ. ಬಸವರಾಜಪ್ಪ ತಂದೆ ದೊಡ್ಡ ಭರಮಪ್ಪ ಅವರು ಖಾಸಗಿ ಬ್ಯಾಂಕೊಂದರಿಂದ ಟ್ರ್ಯಾಕ್ಟರ್ ಖರೀದಿಸಲು 5,79,995 ರೂ.ಗಳನ್ನು ಸಾಲವಾಗಿ ಪಡೆದಿದ್ದರು. ಇದುವರೆಗೂ ಸಾಲವನ್ನು ಪ್ರತಿ ಕಂತಿನಂತೆ 86,200 ರೂ. ಪಾವತಿಸುತ್ತಾ ಬಂದಿದ್ದು, ಆರು ಕಂತುಗಳನ್ನು ಈವರೆಗೆ ಪಾವತಿ ಮಾಡಲಾಗಿದೆ. ಆದರೆ ಬ್ಯಾಂಕ್ ಅಧಿಕಾರಿಗಳು ಇನ್ನೂ 3,66,253.66 ರೂ. ಗಳು ಬಾಕಿ ಉಳಿದಿರುವುದಾಗಿ ಮತ್ತು ಶೀಘ್ರವೇ ಪಾವತಿಸುವಂತೆ ಒತ್ತಡ ಹೇರುತ್ತಿದ್ದಾರೆಂದು ತಿಳಿಸಿದರು.

ಸಂಘದ ಪದಾಧಿಕಾರಿಗಳು ಬ್ಯಾಂಕ್ ವ್ಯವಸ್ಥಾಪಕರನ್ನು ಭೇಟಿ ಮಾಡಿ ಈ ಬಗ್ಗೆ ವಿಚಾರಿಸಿದಾಗ ಬಾಕಿ ಹಣವನ್ನು ಪಾವತಿಸಲೇಬೇಕೆಂದು ಒತ್ತಡ ಹಾಕುತ್ತಿದ್ದಾರೆ.

ಇದುವರೆಗೂ ಪಾವತಿ ಮಾಡಿದ ಮೊತ್ತದ ಬಗ್ಗೆ ತಿಳಿಸಿದಾಗ್ಯೂ ರೈತರಿಗೆ ಮಾನಸಿಕವಾಗಿ ಹಿಂಸಿಸುತ್ತಿದ್ದಾರೆಂದು ದೂರಿದರು.

ಮಾನಸಿಕ ಹಿಂಸೆ ಸಹಿಸಲಾಗದೇ ಸಾಲಗಾರ ರೈತನ ಪುತ್ರ ಲಿಂಗರಾಜ್ ವಿಷ ಕುಡಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಗನ ಚಿಕಿತ್ಸೆಗಾಗಿ ಮತ್ತೆ ಸಾಲ ಮಾಡಿದ್ದಾರೆ ಎಂದರು.

ಜಿಲ್ಲಾಧಿಕಾರಿಗಳು ಮಧ್ಯೆ ಪ್ರವೇಶಿಸಿ ಪ್ರಕರಣವನ್ನು ಸಂಪೂರ್ಣವಾಗಿ ಪರಿಶೀಲಿಸಿ, ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಹಾರ ನೀಡಬೇಕು. ಅ.24 ರೊಳಗಾಗಿ ಜಿಲ್ಲಾಡಳಿತ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗೇನಹಳ್ಳಿ ಬಸವರಾಜಪ್ಪ, ಕೊಗ್ಗನೂರು ಹನುಮಂತಪ್ಪ, ಕರಿಲಕ್ಕೇನಹಳ್ಳಿ ರೇವಣಸಿದ್ದಪ್ಪ, ಕಂದಗಲ್ಲು ಪ್ರೇಮಕ್ಕ, ರಾಜಪ್ಪ ಕರಿಲಕ್ಕೇನಹಳ್ಳಿ, ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಶಾರದಾಂಬಾ ದೇವಸ್ಥಾನದಲ್ಲಿ ಇಂದು

ದಾವಣಗೆರೆಯ ನಿಜಲಿಂಗಪ್ಪ ಬಡಾವಣೆ ರಿಂಗ್ ರಸ್ತೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೀಶ್ವರ, ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಶ್ರೀ ಶಾರದಾಂಬೆಗೆ ಗರುಡ ವಾಹನಾಲಂಕಾರ (ವೈಷ್ಣವೀ) ನಡೆಯುವುದು. ಸಂಜೆ 5 ಗಂಟೆಗೆ ಶ್ರೀ ಲಲಿತಾ ಸಹಸ್ರನಾಮ, ಹಾಡುಗಳು, 6 ಗಂಟೆಗೆ ವಿದ್ವಾನ್ ಎಂ.ಎಸ್. ವಿನಾಯಕ್ ಶಿವಮೊಗ್ಗ ಇವರಿಂದ 'ತೈತ್ತಿರೀಯ ಉಪನಿಷತ್' ವಿಷಯ ಕುರಿತು ಉಪನ್ಯಾಸ ನಡೆಯುವುದು.

## ನಗರದಲ್ಲಿ ಇಂದು ಸಂಗೀತ ಕಾರ್ಯಕ್ರಮ

ಎಸ್.ಕೆ.ಪಿ. ರಸ್ತೆಯಲ್ಲಿಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ದೇವಿಗೆ ಇಂದು ಹೊರನಾಡು ಅನ್ನಪೂರ್ಣೇಶ್ವರಿ ಅಲಂಕಾರ ನಡೆಯುವುದು. ಸಂಜೆ 6.30 ರಿಂದ ಶ್ರೀ ದಾತ್ರಿ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

**MARRYS CONVENT AND PU COLLEGE**
Vinobanagara, Davangere.

**WANTED**
An Experienced lady Teachers with Excellent English Fluency

| Subject | Post | Qualification |
|---|---|---|
| Science | 03 | Bsc., (CBZ), B.Ed., |
| Mathematics | 03 | Bsc., Msc., B.Ed., |
| Primary Sections | 04 | Bsc., |

Contact : 9449 702778, 9481 909493

**ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ ಉಪವಿಭಾಗ, ದಾವಣಗೆರೆ.**

ಪ್ರಕರಣ ಸಂಖ್ಯೆ ಆರ್.ಎ.ಸಿ.ಆರ್. 18/2023 ದಿನಾಂಕ : 16.10.2023

ಅಪೀಲುದಾರರು : ಶ್ರೀಮತಿ ಸುಭದ್ರಮ್ಮ ಕೋಂ ತಿಮ್ಮಪ್ಪ ಮತ್ತು ಇತರರು
- ವಿರುದ್ಧ - ಎದುರುದಾರರು: 2) ಸೂರ್ಯನಾಯ್ಕ ಬಿನ್ ರಾಮಾನಾಯ್ಕ
3) ಜಗದೀಶ್ವರಪ್ಪ ಬಿನ್ ರೇವಣಸಿದ್ದಪ್ಪ, ವಾಸ : ನಂ. 3391/223, ಸಪ್ತಗಿರಿ, ಬಿ ಬ್ಲಾಕ್, 4ನೇ ಮೇನ್, 14ನೇ ಅಡ್ಡ ರಸ್ತೆ, ಎಸ್.ಎಸ್. ಬಡಾವಣೆ, ದಾವಣಗೆರೆ.
ವಿಷಯ : ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ವಡೇರಹಳ್ಳಿ ಗ್ರಾಮದ ಸ.ನಂ. 34/1ರಲ್ಲಿನ 3.00 ಎಕರೆ ಜಮೀನಿನ ಬಗ್ಗೆ.

**ಪ್ರಕಟಣೆ**

ಪ್ರಸ್ತಾಪಿತ ಜಮೀನಿನ ವಿಚಾರವಾಗಿ ಈ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಾಗಿ ಪ್ರಕರಣ ವಿಚಾರಣಾ ಹಂತದಲ್ಲಿ ಇರುತ್ತದೆ. ಪ್ರಕರಣದ ವಿಚಾರಣೆಗೆ ಹಾಜರಾಗಲು 2 ಮತ್ತು 3 ನೇ ಎದುರುದಾರರಿಗೆ ಕಳಹಿಸಿರುವ ನೋಟೀಸುಗಳು ವಿಳಾಸ ಪತ್ತೆಯಾಗದ ಕಾರಣ ಜಾರಿಯಾಗದೇ ಹಿಂದಕ್ಕೆ ಬಂದಿರುತ್ತವೆ. ಆದ್ದರಿಂದ 2 ಮತ್ತು 3ನೇ ಎದುರುದಾರರಿಗೆ ಈ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಯಪಡಿಸುವುದೇನೆಂದರೆ, ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ : 30.10.2023ರಂದು ಮಧ್ಯಾಹ್ನ 3.00 ಗಂಟೆಗೆ ಈ ಕಾರ್ಯಾಲಯದ ನ್ಯಾಯಾಲಯದ ಸಭಾಂಗಣದಲ್ಲಿ ನಿಗದಿಪಡಿಸಿದ್ದು, 2 ಮತ್ತು 3ನೇ ಎದುರುದಾರರು ಖುದ್ದು ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಾಖಲಾತಿಗಳೊಂದಿಗೆ ವಿಚಾರಣೆಗೆ ಹಾಜರಾಗಿ, ತಮ್ಮ ತಕರಾರು/ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ದಾಖಲಾತಿಗಳ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು. ಕಾರಣಾಂತರದಿಂದ ವಿಚಾರಣೆ ಮುಂದೂಡಿದಲ್ಲಿ ಮುಂದಿನ ಮುದ್ದತ್ತಿನ ದಿನಾಂಕವನ್ನು ತಾವೇ ತಿಳಿದುಕೊಂಡು ವಿಚಾರಣೆಗೆ ಹಾಜರಾಗಲು ಸೂಚಿಸಿದೆ.

ಸಹಿ/- ಉಪವಿಭಾಗಾಧಿಕಾರಿ ಪರವಾಗಿ
ದಾವಣಗೆರೆ ಉಪ ವಿಭಾಗ

**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ**
ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

**ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ**

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/ದಾವಾ/103/2019-20ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಭಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಳ , ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಮೆ॥ ಎನ್.ಎನ್. ಏಜೆನ್ಸಿಸ್, ಮಾಲೀಕರು 1) ಶ್ರೀಮತಿ ಪುಷ್ಪಾ ಜಿ.ಎಸ್ ಕೋಂ ಲೇಟ್ ಸಿದ್ದೇಶ್ ಜಿ.ಎಸ್. 2) ನಿಖಿಲ್ ಜಿ.ಎಸ್ ಬಿನ್ ಲೇಟ್ ಸಿದ್ದೇಶ್ ಜಿ.ಎಸ್., 3) ನಿತಿನ್ ಜಿ.ಎಸ್. ಬಿನ್ ಲೇಟ್ ಸಿದ್ದೇಶ್ ಜಿ.ಎಸ್. ಮನೆ ನಂ.573, ಮಹದೇವ, 6ನೇ ಮುಖ್ಯರಸ್ತೆ, 6ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. | ಇ.ಪಿ.ಸಂಖ್ಯೆ 18/2022-23 ರೂ. 4,87,18,073-00 (ರೂಪಾಯಿ ನಾಲ್ಕು ಕೋಟಿ ಎಂಬತ್ತೇಳು ಲಕ್ಷದ ಹದಿನೆಂಟು ಸಾವಿರದ ಎಪ್ಪತ್ಮೂರು ಮಾತ್ರ) (ದಿನಾಂಕ 09-10-2023 ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು) | ದಾವಣಗೆರೆ ನಗರದ ಎಂ.ಸಿ.ಸಿ. ಬಿ ಬ್ಲಾಕ್, 6ನೇ ಮುಖ್ಯರಸ್ತೆ, 5ನೇ ಕ್ರಾಸ್‌ನಲ್ಲಿ ಬರತಕ್ಕ ಡೋರ್ ನಂ. 3581 ರ ಖಾಲಿ ನಿವೇಶನ ಇದರ ಅಳತೆ 140X80 ಅಡಿಗಳು. ಸೊತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ : ಖಾಸಗಿ ಕಟ್ಟಡ, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಖಾಲಿ ನಿವೇಶನ, ದಕ್ಷಿಣಕ್ಕೆ : ಖಾಸಗಿ ಕಟ್ಟಡ. | ದಿನಾಂಕ 26-10-2023 ನೇ ಗುರುವಾರ ಮಧ್ಯಾಹ್ನ 12-00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

**ಹರಾಜಿನ ಷರತ್ತುಗಳು :-** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5 ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ**. (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 18-10-2023
ಸ್ಥಳ : ದಾವಣಗೆರೆ

ಸಹಿ/-
ಬಸವರಾಜ್ ಎಂ.
ಪ್ರಧಾನ ವ್ಯವಸ್ಥಾಪಕರು

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ
ಸಹಿ/-
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

## ವಿದ್ಯುತ್ ಚಾಲಿತ ವಾಹನಗಳಿಗೆ ಸಮರ್ಪಕ ನೀತಿ : ಸಚಿವ ಪಾಟೀಲ್



ಬೆಂಗಳೂರು, ಅ.18 - ವಿದ್ಯುತ್ ಚಾಲಿತ ವಾಹನಗಳ ಉತ್ತೇಜನಕ್ಕೆ ರಾಜ್ಯ ಸರ್ಕಾರ ಸಮರ್ಪಕ ನೀತಿಯನ್ನು ತಂದು ಪರಿಸರದ ರಕ್ಷಣೆಗೆ ಆದ್ಯತೆ ನೀಡಿದೆ ಎಂದು ಭಾರೀ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ ಸ್ಥಾಪಿಸಿರುವ ಜಾಗತಿಕ ಮಟ್ಟದ ವಿದ್ಯುತ್ ಚಾಲಿತ ವಾಹನಗಳ ಉತ್ಕೃಷ್ಟತಾ ಮತ್ತು ನಾವೀನ್ಯತಾ ಕೇಂದ್ರವನ್ನು ಲೋಕಾರ್ಪಣೆ ಮಾಡಿದ ಅವರು, ಈ ಕ್ಷೇತ್ರದಲ್ಲಿ ರಾಜ್ಯವು ಈಗಾಗಲೇ 25 ಸಾವಿರ ಕೋಟಿ ರೂ.ಹೂಡಿಕೆಯನ್ನು ಆಕರ್ಷಿಸಿದೆ. ಮುಂಬರುವ ದಿನಗಳಲ್ಲಿ ಇನ್ನೂ 15 ಸಾವಿರ ಕೋಟಿ ರೂ. ಹೂಡಿಕೆ ಇಲ್ಲಿ ಸಾಧ್ಯವಾಗಲಿದೆ ಎಂದರು.

ರಾಜ್ಯದಲ್ಲಿ ಸದ್ಯಕ್ಕೆ 2 ಲಕ್ಷ ವಿದ್ಯುತ್ ಚಾಲಿತ ವಾಹನಗಳು ನೋಂದಣಿಯಾಗಿದ್ದು, ದೇಶಕ್ಕೆ 3ನೇ ಸ್ಥಾನದಲ್ಲಿದ್ದೇವೆ. ಮುಂಬರುವ ದಿನಗಳಲ್ಲಿ ಇ.ವಿ.ವಾಹನಗಳು ಮತ್ತಷ್ಟು ಜನಪ್ರಿಯವಾಗಲಿದ್ದು, ಸುಗಮ, ತ್ವರಿತ, ಸುರಕ್ಷಿತ ಮತ್ತು ಮಾಲಿನ್ಯರಹಿತ ಸಂಚಾರವನ್ನು ಸಾಧ್ಯವಾಗಿಸಲಿವೆ. ಇನ್ನು 1 ದಶಕದಲ್ಲಿ ಸಾಂಪ್ರದಾಯಿಕ ಇಂಧನದ ವಾಹನಗಳು ನೇಪಥ್ಯಕ್ಕೆ ಸರಿಯಲಿವೆ ಎಂದು ವಿವರಿಸಿದರು.

# ಸ್ಪರ್ಧೆಯಲ್ಲಿ ಗೆಲುವು, ಸೋಲಿಗಿಂತ ಭಾಗವಹಿಸುವಿಕೆ ಮುಖ್ಯ

### ದವನ್ ಕಾಲೇಜಿನ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು




ದಾವಣಗೆರೆ, ಅ. 18- ಇಂದಿನ ವೈಜ್ಞಾನಿಕ ಯುಗದಲ್ಲಿ ಎಲೆ ಮರೆ ಕಾಯಿಯಾಗಿ ಇರುವ ಗ್ರಾಮೀಣ ಪ್ರತಿಭೆಗಳು ಯುವಜನೋತ್ಸವದಂತಹ ಕಾರ್ಯಕ್ರಮಗಳ ಮುಖೇನ ಬೆಳಕಿಗೆ ಬರಲು ಸಹಾಯಕವಾಗಿದೆ ಎಂದು ದವನ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ವೀರೇಶ್ ಪಟೇಲ್ ಹೇಳಿದರು.

ದವನ್ ವಿದ್ಯಾಸಂಸ್ಥೆ ವತಿಯಿಂದ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮೊನ್ನೆ ಏರ್ಪಡಿಸಿದ್ದ ಅಂತರ್ ಕಾಲೇಜು ಮಟ್ಟದ ಯುವಜನೋತ್ಸವದಲ್ಲಿ ಅವರು ಮಾತನಾಡಿದರು.

2 ವರ್ಷಗಳಿಗೊಮ್ಮೆ ದವನ ವಿದ್ಯಾಸಂಸ್ಥೆ ವತಿಯಿಂದ ಯವಜನೋತ್ಸವ ಆಚರಿಸುತ್ತಾ ಬಂದಿದ್ದೇವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಕಾಲೇಜುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಶ್ಲಾಘನೀಯ ಎಂದು ವೀರೇಶ್ ಪಟೇಲ್ ತಿಳಿಸಿದರು.

ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು ಮಾತನಾಡಿ, ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ಬಹಳ ಮುಖ್ಯವಾಗಿದೆ. ಯಾವುದೇ ಸ್ಪರ್ಧೆಯಲ್ಲಿ ಗೆಲುವು, ಸೋಲಿಗಿಂತ ಭಾಗವಹಿಸುವಿಕೆ ಮುಖ್ಯ. ನಿರಂತರ ಪ್ರಯತ್ನ, ಪರಿಶ್ರಮದಿಂದ ಬೆಳೆಯಬೇಕು ಎಂದರು.

ಕಾಲೇಜಿನ ನಿರ್ದೇಶಕ ಹರ್ಷರಾಜ ಎ. ಗುಜ್ಜರ್ ಮಾತನಾಡಿ, ಇದೊಂದು ದೊಡ್ಡ ಕಾರ್ಯಕ್ರಮವಾಗಿದ್ದು, ಹಲವು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ದಾವಣಗೆರೆ ವಿವಿ ವ್ಯಾಪ್ತಿಯ 30 ಕಾಲೇಜುಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಯುವಜನೋತ್ಸವದಲ್ಲಿ ಭಾಗವಹಿಸಿ, ಮೂಕಾಭಿನಯ, ನೃತ್ಯ, ಬೆಸ್ಟ್ ಎಂಟರ್ ಟೈನ್ ಮೆಂಟ್, ರಂಗೋಲಿ ಮತ್ತು ವಿಜ್ಞಾನ, ವಾಣಿಜ್ಯ, ತಾಂತ್ರಿಕ ಪ್ರದರ್ಶನಗಳಲ್ಲಿ ತಮ್ಮಲ್ಲಿರುವ ಪ್ರತಿಭೆಗಳನ್ನು ಅನಾವರಣಗೊಳಿಸಿದರು.

ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿ.ಪಿ.ದೇಸಾಯಿ ಗೀತೆಯನ್ನು ಹಾಡುವ ಮೂಲಕ ರಂಜಿಸಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಅನಿತಾ, ಪ್ರಾಧ್ಯಾಪಕರಾದ ವಿನಯ್, ಕೊಟ್ರಪ್ಪ, ಶಂಕರ್, ಚಂದನ್ ಉಪಸ್ಥಿತರಿದ್ದರು.



## ಹರಪನಹಳ್ಳಿಯಲ್ಲಿ ವಿಶೇಷ ದಸರಾ ಹಬ್ಬ

ಹರಪನಹಳ್ಳಿ, ಅ.18- ಪಟ್ಟಣದ ಆಚಾರ್ಯ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ಡಾ. ರಮೇಶ್ ಕುಮಾರ್ ದಂಪತಿ ನವರಾತ್ರಿ ಹಬ್ಬದ ಪ್ರಯುಕ್ತ 9 ದಿನಗಳ ಕಾಲ ದಸರಾ ಹಬ್ಬವನ್ನು ನವಗ್ರಹಗಳ ಮೂಲಕ ವಿಶೇಷ ಪೂಜೆಯೊಂದಿಗೆ ಆಚರಿಸುತ್ತಿದ್ದಾರೆ.

ದಸರಾ ಹಬ್ಬ ಶುರುವಾಗುವುದಕ್ಕೆ ಮೊದಲು ಬೊಂಬೆಗಳನ್ನು ಚೊಕ್ಕು ಮಾಡಿ, ಅಣಿ ಮಾಡಿಕೊಂಡು ಹಬ್ಬ ಆರಂಭವಾದ ದಿನದಿಂದ ಪ್ರತಿನಿತ್ಯ ದೇವರಿಗೆ ದೀಪ ಬೆಳಗಿ ಪಟ್ಟದ ಬೊಂಬೆಗಳನ್ನು ಜೋಡಿಸಿಕೊಂಡು ಹಿಂದೆಲ್ಲ ಇದರ ಜೊತೆ ಹಲವಾರು ಬೊಂಬೆಗಳನ್ನು ಕೂಡ ಮೆಟ್ಟಲು ಮಾಡಿ ಜೋಡಿಸಿ ಹಿಂದೂ ಸಂಪ್ರದಾಯದಂತೆ ಆಚರಿಸುತ್ತಿದ್ದರು.

9 ದಿನಗಳ ಕಾಲ ಪ್ರತಿ ದಿನ ಬೆಳಿಗ್ಗೆ ದೇವಿಯ ಹೆಸರಿನಲ್ಲಿ ವಿವಿಧ ರೀತಿಯ ಸಿಹಿ ಪದಾರ್ಥವನ್ನು ನೈವೇದ್ಯ ಮಾಡಲಾಗಿತ್ತು.

ಪ್ರತಿದಿನ ದೇವಿಯ ಶ್ಲೋ ಕಗಳನ್ನು ಹೇಳುತ್ತಾ, ದೇವಿ ಮಹಾತ್ಮೆ ಪುರಾಣ ವನ್ನು ಪಠಣ ಮಾಡುತ್ತಾ, ಲಲಿತ ಸಹಸ್ರನಾಮ, ಸೌಂದರ್ಯ ಲಹರಿ ಇಂತಹ ಅನೇಕ ಪೂಜೆ ಕಾರ್ಯಕ್ರಮವನ್ನು ಆಚರಿಸಿಕೊಂಡು ಬಂದಿ ದ್ದೇವೆ ಎಂದು ಡಾ. ರಮೇಶ್ ಕುಮಾರ್ ದಂಪತಿ ಪತ್ರಿಕೆಗೆ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಪಡಿತರ ಧಾನ್ಯ ಹಂಚಿಕೆ

ದಾವಣಗೆರೆ, ಅ. 18 - ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಅಕ್ಟೋಬರ್ ಮಾಹೆಗೆ ಅನ್ವಯವಾಗುವಂತೆ ಪಡಿತರ ಆಹಾರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ.

ಅಂತ್ಯೋದಯ ಪಡಿತರ ಚೀಟಿದಾರರಿಗೆ ಕಾರ್ಡ್‌ಗೆ 21 ಕೆ.ಜಿ ಅಕ್ಕಿ ಮತ್ತು 14 ರಾಗಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2 ಕೆ.ಜಿ ರಾಗಿ ಉಚಿತವಾಗಿ ವಿತರಿಸಲಾಗುತ್ತದೆ. ಹಾಗೂ ಪ್ರತಿ ಕೆ.ಜಿ ಗೆ ರೂ.15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, 2 ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಸರ್ಕಾರದ ಗ್ಯಾರಂಟಿ ಯೋಜನೆಯಡಿ 5 ಕೆ.ಜಿ ಅಕ್ಕಿ ಬದಲಾಗಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದ್ದು, ಯಾವುದೇ ರೀತಿಯ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇ ನೀಡಿ ಪರಿಹರಿಸಿಕೊಳ್ಳಬಹುದೆಂದು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಡಾ. ಎಂ.ಬಿ. ಅಶ್ವಥ್ ತಿಳಿಸಿದ್ದಾರೆ.



## ಮುದ್ದು ಕಂದನ ಅಚ್ಚರಿ ನೋಟ

ಅಚ್ಚರಿಯ ನೋಟ ಮುದ್ದು ಕಂದನು
ಅಪಾಯದರಿವೆಲ್ಲಿಯದು ?
ಕೇಕೆ ಹಾಕಿ ನಗುವ ಕಂದಾ
ನೀನರಿಯೇ ಕೊಲ್ಲುವಾನಂದಾ
ಅಗ್ನಿ ಜ್ವಾಲೆ ನಿನ್ನತ್ತ ಬರುತಿಹುದು
ಅಡಗಲು ಜಾಗವೆಲ್ಲಿಹುದು
ಯುದ್ಧಕ್ಕೆ ಕ್ರೂರ ಮನವೇ ಮೂಲ
ಇನ್ನುಂದೆ ಅದೆಂದೂ
ಬಿಚ್ಚದಿರಲಿ ಬಾಲ.

- ಸಿ.ಎಂ. ಹಿರೇಮಠ,
ಗ್ರಂಥಪಾಲಕರು.

## ರಾಷ್ಟ್ರ ಮಟ್ಟದ ಟೆನ್ನಿಸ್‌ನಲ್ಲಿ ಡಾ. ಟಿ.ಜಿ. ಅನುಪಮಗೆ ಚಿನ್ನ



ದಾವಣಗೆರೆ, ಅ.18- ರಾಜಸ್ಥಾನದ ಉದಯಪುರ ಜಿಲ್ಲೆಯ ಮಹಾರಾಣ ಪ್ರತಾಪ್ ಖೇಲ್ ಗಾಂವ್ ಕ್ರೀಡಾಂಗಣದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಆಲ್ ಇಂಡಿಯಾ ಸಿವಿಲ್ ಸರ್ವೀಸ್ ಟೆನ್ನಿಸ್ ಟೂರ್ನಮೆಂಟ್ 2023-24ರಲ್ಲಿ ಕರ್ನಾಟಕ ತಂಡದಿಂದ ಪಂದ್ಯಾವಳಿಯಲ್ಲಿ ಭಾಗವಹಿಸಿದ ದಾವಣಗೆರೆಯ ಸಿ.ಜಿ ಆಸ್ಪತ್ರೆಯ ಅರವಳಿಕೆ ತಜ್ಞರಾದ ಡಾ. ಟಿ.ಜಿ. ಅನುಪಮಾ ಅವರು ಮಹಿಳೆಯರ ಡಬಲ್ಸ್‌ನಲ್ಲಿ ಚಿನ್ನ ಹಾಗೂ ಸಿಂಗಲ್ಸ್‌ನಲ್ಲಿ ಬೆಳ್ಳಿಯ ಪದಕ ಪಡೆದಿದ್ದಾರೆ ಎಂದು ಡಿಸ್ಟ್ರಿಕ್ಟ್ ಟೆನ್ನಿಸ್ ಅಸೋಸಿಯೇಷನ್‌ನ ತರಬೇತುದಾರ ಮಹಾಂತೇಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಎಸ್.ಎಸ್ ಲೇಔಟ್ ಎ.ಬ್ಲಾಕ್, ಕುವೆಂಪು ನಗರ, ಎಂ.ಸಿ.ಸಿ.ಬಿ ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಬಿ.ಐ.ಇ.ಟಿ ರೋಡ್, ಗ್ಲಾಸ್ ಹೌಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರಕ್ಕೆ ಇಂದು 'ಆರುಷಿ' ಯೋಜನೆಯ ಪಾದಯಾತ್ರೆ

ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 'ಆರುಷಿ' ಹೆಸರಿನಲ್ಲಿ ಯೋಜನೆಯನ್ನು ಸಿದ್ಧಪಡಿಸಿ, ಜಾರಿಗೆ ತರುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಹಮ್ಮಿಕೊಂಡಿರುವ ಪಾದಯಾತ್ರೆ ಇಂದು ನಗರಕ್ಕೆ ಆಗಮಿಸಲಿದೆ ಆರುಷಿ ಯೋಜನೆಯನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ, ಸೂಕ್ತ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡುವಂತೆ ಒತ್ತಾಯಿಸಿ ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಪಾದಯಾತ್ರೆ ಮಾಡುತ್ತಿದ್ದು, ಇಂದು ಬೆಳಿಗ್ಗೆ 10 ಗಂಟೆಗೆ ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ ಹರಿಹರದ ಕಡೆ ಸಾಗಲಿದೆ.

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ ಮಾಡಲು ಅನುಭವವುಳ್ಳ ಸೇಲ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ. ದಾವಣಗೆರೆ.
9686195327

## ದಸರಾ ಕವಿಗೋಷ್ಠಿಗೆ ಹರಿಹರದ ಕವಯತ್ರಿ ಡಾ. ಪಿ.ವೀಣಾ



ಹರಿಹರ, ಅ.18- ಕವಯತ್ರಿ ಡಾ. ಪಿ ವೀಣಾ ಅವರು ನಾಡಹಬ್ಬ ದಸರಾ ಅಂಗವಾಗಿ ನಡೆ ಯಲಿರುವ ಕವಿಗೋಷ್ಠಿಗೆ ಆಯ್ಕೆಯಾಗಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಾಳೆ ಗುರುವಾರ ಬೆಳಿಗ್ಗೆ 11 ಗಂಟೆಗೆ ಕವಯತ್ರಿ ಚ. ಸರ್ವಮಂಗಳ ಅಧ್ಯಕ್ಷತೆಯಲ್ಲಿ ನಡೆಯಲಿರುವ ಪ್ರಾದೇಶಿಕ ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಕವನ ವಾಚಿಸಲಿದ್ದಾರೆ. ಕವಿ ಎಸ್. ಜಿ. ಸಿದ್ದರಾಮಯ್ಯ ಗೋಷ್ಠಿ ಉದ್ಘಾಟಿಸುವರು.

## ಸಂತೇಬೆನ್ನೂರಿನಲ್ಲಿಂದು ಆರೋಗ್ಯ ತಪಾಸಣೆ

ಹೃದಯ ರೋಗ, ನರರೋಗ, ಕೀಲು, ಮೂಳೆ ಮತ್ತು ಚರ್ಮ ರೋಗ, ಕಿಡ್ನಿ ಸ್ಟೋನ್, ಬಿಪಿ., ಶುಗರ್, ಇಸಿಜಿ ಉಚಿತ ತಪಾಸಣಾ ಶಿಬಿರವನ್ನು ಸಂತೇಬೆನ್ನೂರಿನ ಬಸ್ ನಿಲ್ದಾಣದಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಏರ್ಪಡಿಸಲಾಗಿದೆ.

ದಾವಣಗೆರೆಯ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರೀತಿ ಆರೈಕೆ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ನಡೆಯುವ ಶಿಬಿರದ ನೇತೃತ್ವವನ್ನು ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ವಹಿಸಲಿ ದ್ದಾರೆ. ಸಂಪರ್ಕಿಸಿ : 91644 65550, 97317 82463, 84315 41487.

## ರಾಣೇಬೆನ್ನೂರು: ಕೆಸಿಸಿ ಚುನಾವಣೆ ಕಾಂಗ್ರೆಸ್‌ನ ತಿರುಪತಿಗೆ ಭರ್ಜರಿ ಜಯ



ರಾಣೇಬೆನ್ನೂರು,ಅ.18- ಅವಿಭಜಿತ ಧಾರವಾಡ ಜಿಲ್ಲೆಯ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಕೆಸಿಸಿ ಬ್ಯಾಂಕ್ ಪ್ರತಿನಿಧಿ ಚುನಾವಣೆಯಲ್ಲಿ ಒಟ್ಟು 18 ಮತಗಳಲ್ಲಿ ಕಾಂಗ್ರೆಸ್ ಬೆಂಬಲಿತ ರಾಣೇಬೆನ್ನೂರಿನ ತಿರುಪತಿ ಅಜ್ಜನವರ 11ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.

ಪ್ರತಿಸ್ಪರ್ಧಿ ಬಿಜೆಪಿ ಬೆಂಬಲಿತ ಸವಣೂರಿನ ಶರಣಪ್ಪಗೌಡ ಅವರು 7 ಮತಗಳನ್ನು ಪಡೆದು ಪರಾಜಿತರಾದರು.

ಚುನಾವಣೆಯಲ್ಲಿ ತಮ್ಮ ಆಯ್ಕೆಗೆ ಶ್ರಮಿಸಿದ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಸೇರಿದಂತೆ ಕ್ಷೇತ್ರದ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರಿಗೆ ತಿರುಪತಿ ಕೃತಜ್ಞತೆ ಸಲ್ಲಿಸಿದ್ದಾರೆ.

ಶ್ರದ್ಧಾಂಜಲಿ



ದಿನಾಂಕ 18.10.2023ರ ಬುಧವಾರ ಹೃದಯಘಾತದಿಂದ ನಿಧನರಾದ

ದಿ. ಉಮಾಶಂಕರ್

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ದುಃಖತಪ್ತರು :
LIC ಶಾಖೆ-2ರ ಎಲ್ಲಾ ಪ್ರತಿನಿಧಿ ಮಿತ್ರರು
LIAFI ಪದಾಧಿಕಾರಿಗಳು, ಪ್ರತಿನಿಧಿಗಳ ಸಂಘ
ಭಾರತೀಯ ಜೀವ ವಿಮಾ ನಿಗಮ,
ಹರಿಹರ ರಸ್ತೆ, ದಾವಣಗೆರೆ. ಮೊ : 98443 35514

## ಶ್ರೀರಾಮ ದೇವಾಲಯಕ್ಕೆ ವಿದೇಶದ ದೇಣಿಗೆ ಪಡೆಯಲು ಸಮ್ಮತಿ

ನವದೆಹಲಿ, ಅ. 18 – ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ವಿದೇಶದಿಂದ ದೇಣಿಗೆ ಪಡೆಯಲು ಎಫ್.ಸಿ.ಆರ್.ಎ. ಅನುಮತಿ ನೀಡಲಾಗಿದೆ ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಿಳಿಸಿದ್ದಾರೆ.ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರವು ವಿದೇಶಗಳಿಂದ ಸ್ವಯಂ ಪ್ರೇರಿತ ದೇಣಿಗೆ ಪಡೆಯಲು ಗೃಹ ಸಚಿವಾಲಯವು ಎಫ್.ಸಿ.ಆರ್.ಎ. (ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ) ಒಪ್ಪಿಗೆ ನೀಡಿದೆ ಎಂದವರು ಹೇಳಿದ್ದಾರೆ. ಅಯೋಧ್ಯೆಯ ರಾಮ ಮಂದಿ ರದ ನೆಲಮಹಡಿ ನಿರ್ಮಾಣ ಡಿಸೆಂ ಬರ್ ಅಂತ್ಯದ ವೇಳೆಗೆ ಪೂರ್ಣ ಗೊ ಳ್ಳುವ ನಿರೀಕ್ಷೆ ಇದೆ. ಮೂರ್ತಿ ಪ್ರತಿ ಷ್ಠಾಪನಾ ಸಮಾರಂಭ ಮುಂದಿನ ವರ್ಷ ಜನವರಿ 22ರಂದು ನಡೆಯಲಿದೆ.

ಟೈರ್ ಪಾರ್ಕ್
TYRE PARK
SUPREET MOTORS
BOSCH Service

STAFF REQUIRED

| Sl.No. | POSITION | EXPERIENCE |
| --- | --- | --- |
| 1. | CAR ELECTRICIAN (AC Work) | MINIMUM 2 YEARS EXPERIENCES IN MULTI BRAND CAR SERVICE. |
| 2. | CAR MECHANIC / TECHNICIAN | MINIMUM 2 YEARS EXPERIENCES IN MULTI BRAND CAR SERVICE. |
| 3. | TELE CALLER (FEMALE) | MINIMUM 1 YEAR |
| 4. | FIELD MARKETING EXECUTIVE (MALE, Two Wheeler Compulsory) | EXPERIENCE & FRESHER ALSO APPLY |


SUPREET MOTORS
NEAR SHIRAMAGONDANAHALLI, HADADI ROAD, DAVANGERE.
CONTACT : 9380015165 9611536299

॥ ಶ್ರೀ ಶಂಕರಲಿಂಗೇಶ್ವರ ಪ್ರಸನ್ನ ॥





ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 10.06.1943
ನಿಧನ : 11.10.2023

ಶ್ರೀ ಮದ್ದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀಶ್ರೀಶ್ರೀ ತರಳಬಾಳು ಜಗದ್ಗುರು
1108 ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಬೃಹನ್ಮಠ ಸಿರಿಗೆರೆ
ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು, ಶಾಖಾಮಠ, ಸಾಣೇಹಳ್ಳಿ
ಇವರ ಕೃಪಾಶೀರ್ವಾದಗಳೊಂದಿಗೆ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾ॥ ರಾಮಘಟ್ಟ ಗ್ರಾಮದ ವಾಸಿ,
ದನವಿನ ಮನೆ ಲಿಂ॥ ಶರಣೆ ಬಸಮ್ಮ ಲಿಂ॥ ಶರಣ ಶಿವಪ್ಪನವರ ಮಕ್ಕಳಾದ
ಶರಣ ಡಿ.ಎಸ್. ಶೇಖರಪ್ಪ ಮತ್ತು ಸಹೋದರರು, ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ / ಮಿತ್ರರೇ,

ದಿನಾಂಕ : 11.10.2023ನೇ ಬುಧವಾರ ಮಧಾಹ್ನ 3.00 ಗಂಟೆಗೆ, ನನ್ನ ಸಹೋದರ ಹಾಗೂ ದಾವಣಗೆರೆ ವಿದ್ಯಾನಗರ ವಾಸಿ
ಶರಣೆ ಅನ್ನಪೂರ್ಣಮ್ಮನವರ ಪೂಜ್ಯ ಪತಿಯವರಾದ

ಶರಣ ಎಸ್.ರೇವಣಪ್ಪ ನಿವೃತ್ತ ಕಾರ್ಯಪಾಲಕ ಅಭಿಯಂತರರು

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ, ತತ್ಸಂಬಂಧವಾದ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 19.10.2023ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಪಾರ್ವತಮ್ಮ ಶ್ರೀ ಶಾಮನೂರು ಶಿವಶಂಕರಪ್ಪ ಮಿನಿಸಭಾ ಭವನ ಹದಡಿ ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಧರ್ಮಪತ್ನಿ : ಲಿಂ॥ ಶರಣೆ ಗಿರಿಜಮ್ಮ ಮತ್ತು ಮಕ್ಕಳು
ಶರಣೆ ಅನ್ನಪೂರ್ಣಮ್ಮ ಮತ್ತು ಮಕ್ಕಳು
ಲಿಂಗೈಕ್ಯರ ಸಹೋದರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು
ದನವಿನ ಮನೆ ವಂಶಸ್ಥರು, ರಾಮಘಟ್ಟ. ಹಾಗೂ ಬಂಧು ಮಿತ್ರರು.
ಮೊ : 98862 18102, 99867 51902